# ಮಾನಸಿ

ಜೂಲೈ 2003 ತಿಂಗಳ ಪತ್ರಿಕೆ

- ಸಿ. ಕೆ. ಜಾನು ಹಾಗೂ ದೇಬರಂಜನ್ ಸಾರಂಗಿಯವರೊಂದಿಗೆ
- ಸ್ತ್ರೀ ನಿನ್ನ ಸ್ಥಿತಿಯ ನೆನೆಸಿ
- ಸಂಚಲನ ಸೃಷ್ಟಿಸಿದ ಬಾಲಕಿಯ ಡೈರಿ

# ಮಾನಸ

ತಿಂಗಳ ಪತ್ರಿಕೆ ಜುಲೈ 2003
ಸಂಪುಟ 18 ಸಂಚಿಕೆ : 6

**ಸಂಪಾದಕೀಯ ಮಂಡಳಿ :**
ರಾಜೇಶ್ವರಿ ಎಚ್.ಎಸ್.,
ಚಂಪಾವತಿ ಎಚ್.ಎಸ್., ಸರಸ್ವತಿ ದು.,
ಸವಿತಾ ಎ., ಗೀತಾ, ವೆಂ. ವನಜಾ, ನೀಲಾಂಜನ
ಶ್ಯಾಮಲ. ಬಿ.ಎನ್.ಶಾರದ
ಹೆಚ್.ಎಸ್.ಪುಷ್ಪಾ., ಜಿ.ವಿ.ವೇದವಲ್ಲಿ,
ಲಕ್ಷ್ಮಿ ಎ., ವತ್ಸಲಾ ವೈ. ಎಸ್.

**ಸಲಹೆ - ಸಹಕಾರ :**
ಇಳಾ ವಿಜಯ

**ವಿಳಾಸ**
" **ಮಾನಸ** " ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ - ಪೋಸ್ಟ್
ಬೆಂಗಳೂರು - 560 067
**ಇ-ಮೈಲ್** : manasapathrike@yahoo.co.in

**ಸೂಚನೆ :** ಸೂಚನೆ: ಬಿಡಿಪ್ರತಿ 10-00 ರೂ.
ವಾರ್ಷಿಕ ಚಂದಾ 100-00 ರೂ.
ಸಂಸ್ಥೆಗಳಿಗೆ 150-00 ರೂ.

✹ ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು


## ಈ ಸಂಚಿಕೆಯಲ್ಲಿ...



## ಮೈಸೂರು

ಮೈಸೂರಿನಲ್ಲಿರುವ ಓದುಗರು ಮಾನಸ ಪ್ರತಿಗಳಿಗಾಗಿ ಹಾಗೂ ಚಂದಾ ನವೀಕರಣಕ್ಕಾಗಿ ಸಂಪರ್ಕಿಸಿ
**ವೆಂ.ವನಜ :** 2329, 12ನೇ ಮೇನ್, 2 ನೇ ಹಂತ ವಿಜಯನಗರ, ಮೈಸೂರು - 570 017


ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ,
ಪಂಚಾಯಿತಿ ರಸ್ತೆ, ಕಾಡುಗೋಡಿ - ಅಂಚೆ, ಬೆಂಗಳೂರು - 560 067



# ಸಂಪಾದಕೀಯ

ದೇಶದ ಪ್ರಗತಿಯ ಹೆಸರಿನಲ್ಲಿ ಆಣೆಕಟ್ಟು, ಹೆದ್ದಾರಿ, ಉದ್ಯಾನವನಗಳು, ಅಣುಸ್ಥಾವರಗಳು ಭಾರತದ ಉದ್ದಗಲಕ್ಕೂ ಈಗಾಗಲೇ ಮೂಲೆಗುಂಪಾಗಿರುವ ಜನರನ್ನು ಮತ್ತಷ್ಟು ಆತಂಕದ ಸ್ಥಿತಿಗೆ ತಳ್ಳುತ್ತಿರುವುದು ನಮ್ಮ ಕಣ್ಣೆದುರಿನ ಸತ್ಯವಾಗಿವೆ. ಸರ್ಕಾರ ಪ್ರಾಯೋಜಿಸುತ್ತಿರುವ ಅಭಿವೃದ್ಧಿಯ ಹೆಸರಿನ ಯೋಜನೆಗಳು ಯಾರ ಅಭಿವೃದ್ಧಿಗಾಗಿ ಎಂದು ಜನರು ತಿರಸ್ಕರಿಸುತ್ತಾ, ಪ್ರತಿಭಟಿಸುತ್ತಾ ಬಂದಾಗ್ಯೂ ಕೂಡಾ ಸರ್ಕಾರ ಇಂತಹ ಪ್ರತಿಭಟನೆ, ಪ್ರತಿರೋಧಗಳನ್ನು ಹತ್ತಿಕ್ಕುತ್ತಾ ಬರುತ್ತಿರುವುದು ವಾಸ್ತವವಾಗಿ ಬಿಟ್ಟಿದೆ.

ಆದಿವಾಸಿಗಳು ಬದುಕನ್ನು ನೀರಿನ ಜೊತೆ, ಭೂಮಿಯ ಜೊತೆ, ಕಾಡಿನ ಜೊತೆ ಆದಿಕಾಲದಿಂದಲೂ ಹಂಚಿಕೊಂಡು ಬಂದವರು. ಅವರ ಬದುಕನ್ನೆ ಅಲ್ಲಾಡಿಸಿ, ಬದುಕಿನ ಬೇರುಗಳ ಬುಡವನ್ನೇ ಕೆಡಹುತ್ತಾ, 'ಆದಿವಾಸಿಗಳ ಪ್ರಗತಿ'ಗೆ ಎನ್ನುವ ಸರ್ಕಾರದ ಯೋಜನೆಯ ಕುತಂತ್ರಗಳು ಇಂದು ಮುಚ್ಚು-ಮರೆಯಾಗಿ ಉಳಿದಿಲ್ಲ. ದೇಶವನ್ನು ಮಾರಿಕೊಳ್ಳುವ ಜೊತೆಗೆ, ಜನರು, ಜನರ ಬದುಕನ್ನು ಸಹ ಸರ್ಕಾರ ಮಾರಿಕೊಳ್ಳತೊಡಗಿದೆ. ಭೂಮಿ, ಕಾಡು, ನೀರನ ಮೇಲೆ ಆದಿವಾಸಿಗಳಿಗಿರುವ ಹಕ್ಕನ್ನು ಕಸಿದುಕೊಂಡು, ಅವರು ಬದುಕಿರುವ ಸ್ಥಳದಿಂದ ಅವರನ್ನು ಎತ್ತಂಗಡಿ ಮಾಡಿ, ಅವರಿಗೆ ಪರ್ಯಾಯ ವ್ಯವಸ್ಥೆ ಮಾಡದೇ ತ್ರಿಶಂಕು ಸ್ಥಿತಿಯಲ್ಲಿ ಆದಿವಾಸಿಗಳನ್ನು ಇಂದು ನಿಲ್ಲಿಸಲಾಗಿದೆ.

ಹೋರಾಟ, ಪ್ರತಿಭಟನೆಗಳನ್ನು ಸಹ ಸರ್ಕಾರ ಇಂದು ಅಮಾನವೀಯವಾಗಿ ಹತ್ತಿಕ್ಕತೊಡಗಿದೆ. ಮೇಧಾ ಪಾಟ್ಕರ್, ಸಿ.ಕೆ.ಜಾನು ರವರಂತಹ ಹೋರಾಟಗಾರ್ತಿಯರ ಧ್ವನಿಯನ್ನು ಇಂದು ಸರ್ಕಾರ ಹತ್ತಿಕ್ಕಲು ಪ್ರಯತ್ನ ಪಡುತ್ತಿದ್ದರೂ ಸಹ, ಸರ್ಕಾರದ ಇಡಿಯ ಹುನ್ನಾರಗಳನ್ನು ಪ್ರತಿಭಟಿಸುವ ಬಲವಾದ ಅಲೆಯೊಂದು ಆದಿವಾಸಿಗಳ ಬದುಕಿನ ಒಡಲಾಳದಲ್ಲೇ ಟಿಸಿಲೊಡೆದು ಸಂಘರ್ಷಕ್ಕೆ ದಾರಿ ಮಾಡಿಕೊಡುವ ಕಾಲ ದೂರವೇನಿಲ್ಲ.

ಚಳುವಳಿಯನ್ನು ದಮನೀಯವಾಗಿ ಹತ್ತಿಕ್ಕುವ ಪ್ರಯತ್ನದಲ್ಲಿ ಆದಿವಾಸಿಗಳನ್ನು ಸಂಘಟಿಸುತ್ತಿದ್ದ ಪಾರ್ವತಿ, ಹಾಜೀಮಾರನ್ನು ಸರ್ಕಾರ ಹತ್ಯೆಗೈಯ್ದಿರುವುದನ್ನು '**ಮಾನಸ**' ಖಂಡಿಸುತ್ತದೆ. ಸಮಸ್ಯೆಗಳಿಗೆ ಪರಿಹಾರ ನೀಡದಿರುವ ಭಂಡ ಸರ್ಕಾರ ಹತ್ಯೆಯ ಮೂಲಕ ಅವರ ಬಾಯಿ ಮುಚ್ಚಿಸಲು ಪ್ರಯತ್ನ ಪಡುತ್ತಿದೆ. ಪಾರ್ವತಿ, ಹಾಜೀಮಾರ ವಿಚಾರಧಾರೆ, ಪ್ರತಿಭಟನಾ ರೀತಿ, ಹಿಂಸೆ ಇವು ನಮಗೆ ಒಪ್ಪಿಗೆಯಾಗದಿರಬಹುದು. ಆದರೆ ಸಮಾಜದ ಅತ್ಯಂತ ದುರ್ಬಲ ಜನರ ಬದುಕಿನ ಬಗ್ಗೆ ಕಾಳಜಿ ಹೊಂದಿದ್ದ ಈ ಮಹಿಳೆಯರ ಮೇಲೆ ಸರ್ಕಾರ ನಡೆಸಿದ ಹಲ್ಲೆ. ಹತ್ಯೆ ನಮ್ಮೆಲ್ಲರಿಗೂ ಆಘಾತ ಉಂಟುಮಾಡಿದೆ. ಮಾನಸ ಪಾರ್ವತಿ, ಹಾಜೀಮಾರ ಹತ್ಯೆಯನ್ನು ತೀವ್ರವಾಗಿ ಖಂಡಿಸುತ್ತದೆ.

**ಹಲವಾರು ಕಾರಣಗಳಿಂದ ಮಾನಸ ಪತ್ರಿಕೆಯ ಪ್ರಕಟಣೆ ತಡವಾಗಿದೆ. ಜೂಲೈ ಓದುಗರು ಸಹಕರಿಸಬೇಕು. ಜೊತೆಗೆ ಮಾನಸದ ನಿರಂತರತೆ ಕಾಯಲು ನಿಮ್ಮ ಸಹಕಾರ ಅಗತ್ಯ. ದಯವಿಟ್ಟು ಮಾನಸಕ್ಕೆ ಲೇಖನ, ವಿಮರ್ಶೆ ಕಳಿಸಿಕೊಡಿ. ಚಂದಾದಾರರಾಗಿ ಉಳಿದ ಸಂಚಿಕೆಗಳನ್ನು ಜರೂರಾಗಿ ತರಲು ತಮ್ಮ ಸಹಕಾರ - ಸಲಹೆ ಅಗತ್ಯ.**

# ಸಿ.ಕೆ.ಜಾನು ಹಾಗೂ ದೇಬರಂಜನ್ ಸಾರಂಗಿಯವರೊಂದಿಗೆ ಒಂದು ಸಂದರ್ಶನ

ಆದಿವಾಸಿ ಹೋರಾಟ ಹಾಗೂ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಮಾನಸ, ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಒಕ್ಕೂಟ, ಕರ್ನಾಟಕ ವಿಮೋಚನರಂಗ ಮತ್ತು ಕರ್ನಾಟಕ ಮಾನವ ಹಕ್ಕುಗಳ ಸಮಿತಿಯವರು ಒಟ್ಟಾಗಿ ಜುಲೈ ತಿಂಗಳಲ್ಲಿ ಒಂದು ಸಭೆ ಏರ್ಪಡಿಸಿದ್ದರು. ಆದಿವಾಸಿ ಚಳುವಳಿಗಳ ಹೋರಾಟ ಹಾಗೂ ಪ್ರತಿರೋಧದ ಅನುಭವಗಳನ್ನು ಬೆಂಗಳೂರಿನ ಜನತೆಯೊಂದಿಗೆ ಹಂಚಿಕೊಳ್ಳುವುದು ಈ ವೇದಿಕೆಯ ಮುಖ್ಯ ಉದ್ದೇಶವಾಗಿದ್ದಿತು.

ಇಂತಹ ಎರಡು ಆದಿವಾಸಿ - ದಲಿತ ಹೋರಾಟಗಳಲ್ಲಿ ಸಕ್ರಿಯವಾಗಿರುವ ಪ್ರಾಕೃತಿಕ ಸಂವಾದ್ ಸುರಕ್ಷಾ ಪರಿಷತ್ತಿನ ಪ್ರತಿನಿಧಿ ದೇಬರಂಜನ್ ಸಾರಂಗಿ ಹಾಗೂ ಆದಿವಾಸಿ ಗೋತ್ರ ಮಹಾ ಸಭಾದ ಪ್ರತಿನಿಧಿ ಸಿ.ಕೆ. ಜಾನು ಅವರೊಟ್ಟಿಗೆ ಮಾನಸ ನಡೆಸಿದ ಸಂದರ್ಶನವನ್ನು ಇಲ್ಲಿ ದಾಖಲಿಸಲಾಗಿದೆ.

ಪ್ರಾಕೃತಿಕ ಸಂವಾದ್ ಸುರಕ್ಷಾ ಪರಿಷತ್ ಅವರು ದಕ್ಷಿಣ-ಪಶ್ಚಿಮ ಒರಿಸ್ಸಾದಲ್ಲಿ ಬಾಕ್ಸೈಟ್ ಗಣಿಗಾರಿಕೆ ನಡೆಸುತ್ತಿರುವುದನ್ನು ವಿರೋಧಿಸಿ ಹೋರಾಟ ನಡೆಸುತ್ತಿದ್ದಾರೆ. ಈ ಖನಿಜಭರಿತವಾದ ಒರಿಸ್ಸಾ ಜಿಲ್ಲೆಗಳಲ್ಲಿ ಬಹುರಾಷ್ಟ್ರೀಯ ಅಲ್ಯೂಮಿನಿಯಂ ಉತ್ಪಾದನಾ ಕಂಪನಿಗಳ ಪ್ರವೇಶದಿಂದ ಸಾವಿರಾರು ವರ್ಷಗಳಿಂದ ಅಲ್ಲಿ ವಾಸಿಸುತ್ತಿರುವ ಆದಿವಾಸಿಗಳು ಮತ್ತೆ ದಲಿತರು ತಮ್ಮ ಮನೆ-ಮಠಗಳ ಜೊತೆಗೆ ಭೂಮಿಯನ್ನು ಕಳೆದುಕೊಳ್ಳಬೇಕಾಗುತ್ತಿದೆ. ಆದಿವಾಸಿ ಗೋತ್ರ ಮಹಾ ಸಭಾದವರು ಕೇರಳದಲ್ಲಿ ಪರಂಪರಾಗತವಾಗಿದ್ದ ತಮ್ಮ ಜಾಗದಿಂದ ಹೊರನೂಕಲ್ಪಡುತ್ತಿರುವ ಆದಿವಾಸಿ ಹಾಗೂ ದಲಿತರ ಭೂಮಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಈ ದಿನ ತಮ್ಮದೇ ಭೂಮಿ ಎಂದು ಹೇಳಿಕೊಳ್ಳಲೂ ಸಹ ಅವರಿಗೆ ಭೂಮಿ ಉಳಿದಿಲ್ಲ.

ಈ ಎರಡೂ ಹೋರಾಟಗಳಲ್ಲಿ ಪ್ರಮುಖವಾದ ಸಾಮ್ಯತೆ ಹಾಗೂ ವ್ಯತ್ಯಾಸಗಳಿವೆ. ಆದಾಗ್ಯೂ ಎರಡೂ ಹೋರಾಟಗಳೂ ವಿಶ್ವದ ಅಧಿಕಾರರಹಿತ ಜನರು ಅತಿ ಹೆಚ್ಚು ಅಧಿಕಾರ ಹೊಂದಿದವರ ವಿರುದ್ಧ ನಡೆಸುತ್ತಿರುವ ಹೋರಾಟಗಳಾಗಿವೆ. ಎರಡೂ ಹೋರಾಟಗಳೂ ದಲಿತ ಹಾಗೂ ಆದಿವಾಸಿ -ಗಳನ್ನೊಳಗೊಂಡ ಹೋರಾಟಗಳೇ. ಒಬ್ಬರು ಭೂಮಿ ಹಾಗೂ ಅದರ ಒಡೆತನಕ್ಕಾಗಿ ಹೋರಾಟ ನಡೆಸುತ್ತಿದ್ದರೆ, ಇನ್ನೊಬ್ಬರು ಕಳೆದುಕೊಳ್ಳುತ್ತಿರುವ ಭೂಮಿಗೆ ಹಾಗೂ ಅದರ ಒಡೆತನ ಉಳಿಸಿಕೊಳ್ಳುವುದಕ್ಕೆ ಹೋರಾಟ ನಡೆಸುತ್ತಿದ್ದಾರೆ. ಎರಡೂ ಸ್ವಾಯತ್ತ ಹೋರಾಟಗಳಾಗಿದ್ದು, ಯಾವುದೇ ರಾಜಕೀಯ ಪಕ್ಷ ಅಥವಾ ಸಾಂಸ್ಥಿಕ ಹಣಕಾಸಿನ ನೆರವಿನಿಂದ ದೂರ ಉಳಿದಂತಹ ಸಂಘಟನೆಗಳಾಗಿವೆ. ಈ ಹಂತದಲ್ಲಿ ಈ ಹೋರಾಟಗಳಲ್ಲಿ ಮಹಿಳೆಯರ ಪಾತ್ರ, ದಿನ ನಿತ್ಯ ಜೀವನದಲ್ಲಿ ಅವರು ನಿರ್ಧಾರ ತೆಗೆದುಕೊಳ್ಳುವ ಪರಿ ಹಾಗೂ ಇತರ ವಿಷಯಗಳ ಕುರಿತು ಚರ್ಚಿಸುವುದು ಮಾನಸದ ಮುಖ್ಯ ಉದ್ದೇಶವಾಗಿತ್ತು.

ಆದಿವಾಸಿ ಗೋತ್ರ ಮಹಾ ಸಭಾದ ಮುಖ್ಯ ನೇತಾರರಾದ ಸಿ.ಕೆ.ಜಾನುರವರೊಟ್ಟಿಗಿನ ಸಂದರ್ಶನ ಕಡಿಮೆ ಸಮಯ ಹಾಗೂ ಕೊನೆಯ ಕ್ಷಣದಲ್ಲಿ ಮಾಡಿದುದರಿಂದ ಅನೇಕ ಪ್ರಶ್ನೆಗಳನ್ನು ಕೇಳಲಾಗಲಿಲ್ಲ. ಹಾಗೂ ಅನೇಕ ಸಂಗತಿಗಳನ್ನು ತಿಳಿದುಕೊಳ್ಳಲಾಗಲಿಲ್ಲ. ಸಿ.ಕೆ.ಜಾನು ಹಾಗೂ ದೇಬರಂಜನ್ ರೊಂದಿಗಿನ ಸಂದರ್ಶನದಿಂದ ಎರಡೂ ಹೋರಾಟಗಳಲ್ಲಿ ಮಹಿಳೆಯರು (ವಿರೋಧಿ ಸಭೆಗಳಲ್ಲಿ ಹಾಗೂ ಸಾರ್ವಜನಿಕ ಚಟುವಟಿಕೆಯಲ್ಲಿ) ಮುಂಚೂಣಿಯಲ್ಲಿರುವುದು ಹಾಗೂ ಅವರು ಚಳುವಳಿಗಳ ಬೆನ್ನೆಲುಬಾಗಿರುವುದು ವ್ಯಕ್ತವಾಗುತ್ತದೆ.

ಪ್ರಾಕೃತಿಕ ಸಂವಾದ್ ಸುರಕ್ಷಾ ಪರಿಷತನ ಕಾರ್ಯಕರ್ತೆ ದೇಬರಂಜನ್ ಸಾರಂಗಿಯವರೊಂದಿಗಿನ ಸಂದರ್ಶನವನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.

**ಪ್ರ : ಯಾವ ರೀತಿಯ ಸಮಸ್ಯೆಗಳನ್ನು ಆದಿವಾಸಿ ಮಹಿಳೆಯರು ನಿಮ್ಮ ಪ್ರದೇಶಗಳಲ್ಲಿ ಎದುರಿಸುತ್ತಿದ್ದಾರೆ?**

ಆದಿವಾಸಿ ಸಮುದಾಯದಲ್ಲಿರುವ ಮಹಿಳೆಯರು ಸಹ ಹಲವು ಸಮಸ್ಯೆಗಳನ್ನು ಎದುರಿಸುತ್ತಾರೆ. ಆದರೆ ಇತರ ಮಹಿಳೆಯರ ಸಮಸ್ಯೆಗಳಿಗೆ ಹೋಲಿಸಿದರೆ ಇವರ ಸಮಸ್ಯೆಗಳೇ ಬೇರೆ ರೀತಿಯವಾಗಿವೆ ಹಾಗೂ ಕಡಿಮೆ ಎಂದೆ ಹೇಳಬಹುದು. ಉದಾಹರಣೆಗೆ ಆದಿವಾಸಿ ಮಹಿಳೆಗೆ ತನ್ನ ಜೊತೆಗಾರನನ್ನು ಹುಡುಕಿಕೊಳ್ಳುವ ಪೂರ್ಣ ಸ್ವಾತಂತ್ರ್ಯವಿದೆ ಹಾಗೆಯೇ ಅವನೊಟ್ಟಿಗೆ ಸರಿ ಹೊಂದಲಿಲ್ಲವೆಂದಾಗ ಬದಲಿಸುವ, ಆ ಮದುವೆ ಮುರಿಯುವ ಅಥವಾ ವಿವಾಹೇತರ ಸಂಬಂಧ ಇಟ್ಟುಕೊಳ್ಳುವ ಸ್ವಾತಂತ್ರ್ಯ, ಆಯ್ಕೆ ಈ ಮಹಿಳೆಯರಿಗಿದೆ.

ಹಾಗೆಯೇ ಇವರಲ್ಲಿ ಮದುವೆ ಎಂಬುದು ದುಬಾರಿಯಾದುದಲ್ಲ. ಸಾಮಾನ್ಯವಾಗಿ 150 ರೂ. ನಿಂದ 200ರೂಪಾಯಿಗಳಲ್ಲಿ ಇವರ ಮದುವೆ ಖರ್ಚು ಮುಗಿದು ಹೋಗುತ್ತದೆ! ಮೊದಲನೇದಾಗಿ ಇಲ್ಲಿ ಗಂಡು ಹೆಣ್ಣನ್ನು ತಮ್ಮ

ಮನೆಗೆ ತಂದುಕೊಳ್ಳುತ್ತಾರೆ. ಹಾಗಾಗಿ ಇವರಲ್ಲಿ ವರದಕ್ಷಿಣೆ ನೀಡಿ ಮದುವೆ ಮಾಡಿಕೊಳ್ಳುವ ಪ್ರಮೇಯವೇ ಬರುವುದಿಲ್ಲ. ಅದರಲ್ಲೂ ಆಗುವ ಖರ್ಚು ಸಹ ಊಟದ್ದು. ಆ ಖರ್ಚನ್ನು ಸಹ ಅಲ್ಲಿನ ಜನರೇ ಹಂಚಿಕೊಳ್ಳುತ್ತಾರೆ. ಕೆಲವರು ದವಸ ಧಾನ್ಯಗಳನ್ನು ನೀಡಿದರೆ, ಕೆಲವರು ತರಕಾರಿಳನ್ನು ನೀಡುತ್ತಾರೆ. ಹೀಗೆ ಎಲ್ಲವನ್ನೂ ಹಂಚಿಕೊಂಡು ಮಾಡುತ್ತಾರೆ. ಅದೇನಾದರೂ ಮಾಂಸದೂಟವಾದರೆ 50 ರಿಂದ 60 ರೂಪಾಯಿ ಹೆಚ್ಚಾಗಿ ಖರ್ಚಾಗಬಹುದು. ಅದಕ್ಕಿಂತ ಹೆಚ್ಚಿಲ್ಲ. ಹಾಗಾಗಿ ಇಲ್ಲಿ ಹೆಣ್ಣಿನ ಮನೆಯವರಿಗೆ ಮದುವೆ ಎಂಬುದು ಭಾರವಾಗುವುದಿಲ್ಲ.

ಆಗಲೇ ಹೇಳಿದಂತೆ, ಆದಿವಾಸಿ ಮಹಿಳೆಯರೂ ಸಹ ಹಲವು ಸಮಸ್ಯೆಗಳನ್ನು ನಮ್ಮ ಕಡೆ ಎದುರಿಸುತ್ತಾರೆ. ಉದಾಹರಣೆಗೆ, ಮಹಿಳೆಯರೇ ಮನೆಯ ಎಲ್ಲಾ ಕೆಲಸದ ಭಾರ ಹೊರಬೇಕಾಗುತ್ತದೆ. ಮನೆಯನ್ನು ನೋಡಿಕೊಳ್ಳುವುದು, ಸ್ವಚ್ಛವಾಗಿಡುವುದು, ಅಡುಗೆ ಮಾಡುವುದು, ಮತ್ತೆ ನೀರು ತರುವುದು, ಕಾಡಿನಿಂದ ಸೌದೆ ತರುವುದು ಇವೆಲ್ಲ ಮಹಿಳೆಯರ ಕೆಲಸ. ಪುರುಷರು ಸಾಮಾನ್ಯವಾಗಿ ಈ ಕೆಲಸಗಳಲ್ಲಿ ಭಾಗವಹಿಸುವುದಿಲ್ಲ. ಹೀಗಾಗಿ ಪುರುಷರು ಹೆಚ್ಚು ಬಿಡುವಿನ ಸಮಯ ಹೊಂದಿರುತ್ತಾರೆ. ಗೊಡ್ಡು ಹರಟೆಗೆ ಸಮಯ... ಇತ್ಯಾದಿ. ಮಹಿಳೆಯರು ಮನೆಗಳಿಗೆ ಬೇಗ ಹೋಗಬೇಕಾಗುತ್ತದೆ. ಅವರಿಗೆ ಸಂಘಟನೆಯ ಕೆಲಸದಲ್ಲಿ ಪಾಲ್ಗೊಳ್ಳಲು ಸಮಯವಿರುವುದಿಲ್ಲ. ಹಾಗಾಗಿ ನಮ್ಮ ಹೋರಾಟಗಳಲ್ಲಿ ಪಾಲ್ಗೊಳಲು ಅವರಿಗೆ ಇದು ದೊಡ್ಡ ಅಡಚಣೆಯಾಗಿದೆ.

ಬಾಲ್ಯದಿಂದ ಪ್ರೌಢಾವಸ್ಥೆಯವರೆಗೂ ಹುಡುಗಿಯರು ತಂದೆಗೆ ನಂತರ ಗಂಡನಿಗೆ ಕೆಲಸ ಮಾಡಬೇಕಾಗುತ್ತದೆ. ಈ ಎಲ್ಲಾ ಮಿತಿಗಳ ನಡುವೆಯೂ ಆದಿವಾಸಿ ಹೆಂಗಸರು ಇತರೇ ಹೆಂಗಸರಿಗಿರದ ಸ್ವಾತಂತ್ರ್ಯವನ್ನು ಹೊಂದಿದ್ದಾರೆ. ಉದಾಹರಣೆಗೆ ಒರಿಸ್ಸಾದ ಕುಚೇಯ್ ಪಾಡರ್‌ನಲ್ಲಿ ಇಬ್ಬರು ಮಕ್ಕಳಿರುವ ಆದಿವಾಸಿಯೊಬ್ಬಳಿಗೆ ಆಕೆಯ ಗಂಡ ಜೊತೆಗೆ ಸಮಸ್ಯೆ ಇತ್ತು. ಆಕೆ ತನ್ನ ಗಂಡನನ್ನು ಬಿಟ್ಟು ಮರಳಿ ತವರಿಗೆ ಬಂದಳು. ಅಲ್ಲಿ ಅವಳನ್ನು ಸಹಜವಾಗಿಯೇ ಒಪ್ಪಿಕೊಳ್ಳಲಾಯಿತು. ಆದಿವಾಸಿ ತಂದೆ ತಾಯಿಯರಿಗೆ ತಮ್ಮ ಮಗಳು ಗಂಡನನ್ನು ಬಿಟ್ಟು ತವರಿಗೆ ಬಂದಾಗ ಯಾವುದೇ ಸಾಮಾಜಿಕ ಒತ್ತಡವಿರುವುದಿಲ್ಲ.

**ಪ್ರ : ಆದಿವಾಸಿಗಳಲ್ಲಿನ ಭೂಮಿ ಹಕ್ಕು, ಭೂ ಒಡೆತನ -ಅದರಲ್ಲೂ ವಿಶೇಷವಾಗಿ ಆದಿವಾಸಿ ಮಹಿಳೆಯರಿಗೆ ಸಂಬಂಧಿಸಿದಂತೆ. ಈ ಬಗ್ಗೆ ಹೇಳುವಿರಾ?**

ಬ್ರಿಟಿಷರು ಭಾರತಕ್ಕೆ ಬರುವ ಮೊದಲು ಆದಿವಾಸಿ ಸಮುದಾಯದಲ್ಲಿ ಯಾವುದೇ ತರಹದ ಭೂ ಒಡೆತನದಂತಹ ಕಲ್ಪನೆಯೇ ಇರಲಿಲ್ಲ. ಇಡೀ ಸಮುದಾಯವೇ ಉಳುಮೆ ಮಾಡುತ್ತಿದ್ದರು. ಬ್ರಿಟಿಷರು ಬಂದು ಈ ಪದ್ಧತಿಯನ್ನು ಬದಲಾಯಿಸಿದರು. ಯಾಕೆಂದರೆ ಆ ಭೂಮಿಯಿಂದ ಅವರಿಗೆ ಆದಾಯ ಬೇಕಾಗಿತ್ತು. ಆಯಾ ಕುಟುಂಬಗಳ ಗಂಡಸರಿಗೆ ಪಟ್ಟಾಗಳನ್ನು ವರ್ಗಾವಣೆ ಮಾಡಿ, ಆ ನಂತರ ಭೂಮಿಯ ಮೇಲೆ ತೆರಿಗೆಯನ್ನು ವಿಧಿಸಲು ಆರಂಭಿಸಿದರು. ಹೀಗೆ ಬ್ರಿಟಿಷ ಸರ್ಕಾರ ಪಿತೃಪ್ರಾಧಾನ್ಯ ಹಿಡಿತದ ವ್ಯವಸ್ಥೆ ಜಾರಿಗೆ ತಂದಿದ್ದಲ್ಲದೇ, ಭೂಮಿಯ ಹಕ್ಕನ್ನು ಪುರುಷರ ವಶಕ್ಕೆ ಒಪ್ಪಿಸಿದರು. ತಂದೆಯಿಂದ-ಮಗನಿಗೆ ಹೀಗೆ ಮುಂದುವರೆದುಕೊಂಡು ಬಂದಿತು.

ಆದರೆ ಎಲ್ಲಾ ಭೂಮಿಯೂ ಹೀಗೆಯೇ ವರ್ಗಾವಣೆ ಹೊಂದಲಿಲ್ಲ. ಎಲ್ಲರಿಗೂ ಸೇರಿದ್ದ ಭೂಮಿ ಉಳಿದೇ ಇತ್ತು. ವಿಶೇಷವಾಗಿ ಬೆಟ್ಟಗುಡ್ಡಗಳಲ್ಲಿನ ಭೂಮಿ. ಇದನ್ನು ನಾವು 'ಡೊಂಗರ್' ಎಂದು ಕರೆಯುತ್ತೇವೆ. ಇದು ಜನರ ಒಡತನದಲ್ಲಿತ್ತು. ಈ 'ಡೊಂಗರ್' ಭೂಮಿಯಲ್ಲಿ ಬೆಳೆ ತೆಗೆಯಲು, ಉಳುಮೆ ಮಾಡಲು ಮಹಿಳೆಯರಿಗೆ ಪೂರ್ಣ ಸ್ವಾತಂತ್ರ್ಯವಿತ್ತು. ಭೂಮಿ ಇಲ್ಲದ, ತೊಂದರೆಯಲ್ಲಿರುವ ಅಥವಾ ಇತರೇ ಕಾರಣಗಳಿಂದ ದುರ್ಬಲರಾಗಿರುವ ಮಹಿಳೆಯರಿಗೆ ಈ ಸಾಮಾನ್ಯ ಭೂಮಿಯಲ್ಲಿ ದುಡಿಮೆ ಮಾಡಲು ಅವಕಾಶವಿತ್ತು.

ಕೊಚಾಯಾ ಪಾಡರ್‌ನಲ್ಲಿ ನನಗೊಬ್ಬರು ಸ್ನೇಹಿತರಿದ್ದರು. ಆಗಾಗ್ಗೆ ಟೀ ಕುಡಿಯುತ್ತಾ ನಾವು ಅದೂ ಇದೂ ಮಾತನಾಡುತ್ತಿರುತ್ತೇವೆ. ಭೂಮಿಯ ಜಂಟಿ ಒಡೆತನದ ಬಗ್ಗೆ ಆತನಿಗೆ ಒಪ್ಪಿಗೆ ಇದೆಯೇ? ಎಂದು ಒಮ್ಮೆ ಕೇಳಿದೆ. "ನೀವು ಹೊಂದಿರುವ ಭೂಮಿಯ ಬಗ್ಗೆ ನಿಮ್ಮ ಹೆಂಡತಿಗೆ ಜಂಟಿ ಒಡೆತನ ಕೊಡುತ್ತೀರಾ?" ಎಂದು ನಾನು ಕೇಳಿದೆ. ಆತ ತಕ್ಷಣ "ನಾನ್ಯಾಕೆ ಕೊಡಲಿ? ಅದರ ಅವಶ್ಯಕತೆಯೇ ಇಲ್ಲ". ಮತ್ತೆ ನಾನು ಒತ್ತಾಯಿಸಿ ಕೇಳಿದಾಗ, ಆಗ ಆತ, "ಒಂದು ಪಕ್ಷ ಆಕೆ ಬೇರೆ ವ್ಯಕ್ತಿಯೊಡನೆ ಇರುವುದಕ್ಕಾಗಿ ನನ್ನ ಬಿಟ್ಟು ಹೋದರೆ ಆಕೆಗೆ ಅರ್ಧ ಭೂಮಿ ಕೊಡಬೇಕಾಗುತ್ತದೆ ಅಲ್ಲವೇ?". ಅರ್ಧ ಭೂಮಿ ಆಕೆಗೇಕೆ? ಎನ್ನುವ ಆಲೋಚನಕ್ರಮ ಆತನದು. ಇದು ಅಲ್ಲಿನ ಗಂಡಸರಲ್ಲಿರುವ ಸಾಮಾನ್ಯವಾದ ಆಲೋಚನಾಕ್ರಮ.

**ಪ್ರ : ಪುರುಷರ ವಿಚಾರದಲ್ಲೂ ಇದು ಸತ್ಯವಲ್ಲವೇ? ಒಬ್ಬ ಗಂಡಸು ಬೇರೆ ಹೆಂಗಸಿಗಾಗಿ ತನ್ನ ಹೆಂಡತಿಯನ್ನು ಬಿಟ್ಟು ಹೋದರೆ, ಎಲ್ಲಾ ಭೂಮಿ ಆತನಿಗೇ ಹೋಗುವುದಿಲ್ಲವೇ? ಆ ಸಂದರ್ಭದಲ್ಲಿ ಹೆಂಡತಿಯ ಪಾಡೇನು?**

ಅದೂ ಸತ್ಯ. ಇದರಲ್ಲಿ ಇನ್ನೂ ಕೆಲವು ವಿಚಾರಗಳಿವೆ. ಹಿಂದೆ ಹೆಚ್ಚಿನ ಭೂಮಿ ಆದಿವಾಸಿಗಳ ಸ್ವಾಧೀನದಲ್ಲಿಯೇ ಇತ್ತು. ನಂತರದಲ್ಲಿ ಅದು ತುಂಡು ತುಂಡು ಭೂಮಿಯಾಗಿ ಮಾರ್ಪಟ್ಟಿತು. ಮೊದಲು ಹೆಚ್ಚಿನ ಭೂ ಸ್ವಾಧೀನವಿದ್ದಾಗ, ಆ ಸಮಯದಲ್ಲಿ ಭೂಮಿಯ ಒಡೆಯರು ಎರಡು, ಮೂರು, ನಾಲ್ಕು ಮದುವೆಗಳನ್ನು ಮಾಡಿಕೊಳ್ಳುತ್ತಿದ್ದನು. ಎಲ್ಲರನ್ನೂ ಆರಾಮವಾಗಿ ನಿಭಾಯಿಸಿ, ಭೂಮಿಯನ್ನು ಎಲ್ಲಾ ಮಕ್ಕಳಿಗೂ ಸಮನಾಗಿ ಹಂಚುತ್ತಿದ್ದನು. ಆದರೆ ಈಗ ಹಾಗೆ ಮಾಡಲು ಆಗುವುದಿಲ್ಲ. ಈಗ ಭೂ ಒಡೆತನವು ಚಿಕ್ಕ ಚಿಕ್ಕ ಭೂಮಿಗೆ ಮಾತ್ರ ಸೀಮಿತವಾಗಿದೆ. ಹೆಚ್ಚಿನ ಹೆಂಡತಿಯರನ್ನು ನಿಭಾಯಿಸುವುದು ಆರ್ಥಿಕವಾಗಿ ಕಷ್ಟವಾಗುತ್ತದೆ. ಹಾಗಾಗಿ ಸಹಜವಾಗಿಯೇ ಕುಟುಂಬಗಳು ಚಿಕ್ಕದಾಗುತ್ತಾ ಬಂದಿವೆ.

**ಪ್ರ : ಅನೇಕ ಹೆಂಡತಿಯರನ್ನು ಹೊಂದಬೇಕೆಂದಿದ್ದರೂ ಸಹ ಹೊಂದಲಾರದ ಆತನ ಹತಾಶೆ ಹೆಂಡತಿಯ ಮೇಲಿನ ಹಿಂಸೆಗೆ ಕಾರಣವಾಗುತ್ತಿದೆಯೇ ?**

ಉತ್ತರ ಹೇಳುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಇದು ಎಲ್ಲರಿಗೂ ಅನ್ವಯವಾಗುವಂತಹ ವಿಚಾರವಲ್ಲ. ಒಂದು ಅಥವಾ ಎರಡು ಘಟನೆಗಳಲ್ಲಿ ಹೆಂಡತಿಯೊರ್ವಳು ಹೀಗೆ ಆರೋಪಿಸಿದ್ದನ್ನು ನಾನು ಕೇಳಿದ್ದೇನೆ.' ನನ್ನ ಗಂಡ ಯಾಕೆ ನನ್ನ ಜೊತೆ ಕೆಟ್ಟದ್ದಾಗಿ ವರ್ತಿಸುತ್ತಾನೆ ನನ್ಗೆ ಗೊತ್ತು ಅವನು ಇನ್ನೊಬ್ಬಳನ್ನು ಕಟ್ಟಿಕೊಳ್ಳಬೇಕು'. ಹೀಗೆ ಪ್ರತಿಕ್ರಿಯಿಸಿರುವ ಒಂದೋ ಎರಡೋ ಘಟನೆ ಇರಬಹುದು. ಆದರೆ ಆದಿವಾಸಿ ಮಹಿಳೆಯರಿಗೆ 'ಮದುವೆ' ಒಂದು ಶೋಷಿತ ವ್ಯವಸ್ಥೆ ಏನೂ ಅಲ್ಲ. ಅದನ್ನು ಅವರು ಸುಲಭವಾಗಿ ಮುರಿಯಬಹುದಾಗಿದೆ. ವಿವಾಹೇತರ ಸಂಬಂಧಗಳು ಆದಿವಾಸಿ ಮಹಿಳೆಯರಲ್ಲಿ ಅತ್ಯಂತ ಸಾಮಾನ್ಯ. ಹಾಗಾಗಿ 'ಹೆಂಡತಿಯನ್ನು ಹಿಂಸಿಸುವುದು' ಒಂದು ಸಾಮಾನ್ಯ ಪರಿಕಲ್ಪನೆಯಾಗಿ ಹೇಳಲಾಗದು. ಈಗ ನಡೆಯುತ್ತಿರುವ ಹೋರಾಟಗಳಿಂದಾಗಿ ಕೂಡಾ ಹೆಂಗಸರು ಹೆಚ್ಚು ಸಂಘಟಿತರಾಗುತ್ತಿದ್ದಾರೆ. ಅವರೂ ಹೆಚ್ಚು ಧ್ವನಿ ಎತ್ತುತ್ತಿದ್ದಾರೆ. ಯಾರಿಗಾದರೂ ಏನಾದರೂ ಸಮಸ್ಯೆಯಾದಲ್ಲಿ ಒಂದು ಗುಂಪಾಗಿ ಅವರು ಬೇಗ ಪ್ರತಿಕ್ರಿಯಿಸುವುದನ್ನು ಕೂಡಾ ಕಾಣಬಹುದಾಗಿದೆ.

**ಪ್ರ : ಬಾಕ್ಸೈಟ್ ಗಣಿಗಾರಿಕೆ ವಿರೋಧಿಸಿ ನಡೆಯುತ್ತಿರುವ ಹೋರಾಟಗಳಲ್ಲಿ ಈ ಮಹಿಳೆಯರು ಯಾವ ರೀತಿ ಪಾಲ್ಗೊಳ್ಳುತ್ತಿದ್ದಾರೆ ?**

ಈ ಗಣಿ ಕೈಗಾರಿಕೆ ತಮ್ಮ ಪ್ರದೇಶಗಳಲ್ಲಿ ಪ್ರವೇಶವಾದರೆ ತಮಗೆ ಕೆಟ್ಟ ಪರಿಣಾಮಗಳಾಗುತ್ತದೆ ಎಂಬ ವಾಸ್ತವ ಈ ಆದಿವಾಸಿ ಮಹಿಳೆಯರಿಗೆ ತಿಳಿದಿದೆ. ಅವರು ಭೂಮಿಯ ಜೊತೆ ನಿಕಟ ಸಂಪರ್ಕವಿಟ್ಟುಕೊಂಡಿದ್ದಾರೆ. ಮಹಿಳೆ ಮಗುವಿಗೆ ಜನ್ಮ ವಿತ್ತಾಗ, ಮೊದಲು ಭೂಮಿಯೇ ಆ ಮಗುವನ್ನು ಸ್ವೀಕರಿಸುವುದು. ಹಾಗಾಗಿ ಅವರಿಗೆ ಭೂಮಿಯ ಜೊತೆಗೆ ಆತ್ಮೀಯ ಸಂಬಂಧ. ಹೆಣ್ಣು ತನ್ನ ಕುಟುಂಬವನ್ನು ಸಲಹುವ ಹೆಚ್ಚಿನ ಹೊರೆಯನ್ನು ಹೊಂದಿದ್ದಾಳೆ. ಇಂದ್ರಭಟಿ, ಧಾಮನ ಜೋಡಿ ಮುಂತಾದ ಪ್ರದೇಶಗಳಲ್ಲಿ ಸ್ಥಳಾಂತರಗಳಿಂದಾಗಿ ಆದ ಭೀಕರ ಪರಿಣಾಮಗಳನ್ನು ಈ ಆದಿವಾಸಿ ಮಹಿಳೆಯರು ಕಂಡಿದ್ದಾರೆ. ಅಲ್ಲಿನ ಮಹಿಳೆಯರು ಭಿಕ್ಷೆ ಬೇಡುವ ಸ್ಥಿತಿ ತಲುಪಿದ್ದಾರೆ. ಪ್ರಧಾನ ಸಂಸ್ಕೃತಿಯ ಸಮಾಜಕ್ಕೆ ನೂಕಲ್ಪಟ್ಟ ಈ ಮಹಿಳೆಯರು ಪ್ರಧಾನ ಸಂಸ್ಕೃತಿಯ ವಾಹಿನಿಯಿಂದ ನಿರಂತರವಾಗಿ ಹಿಂಸೆ, ಶೋಷಣೆ ಅನುಭವಿಸುತ್ತಿದ್ದಾರೆ. ನಮ್ಮ ಪ್ರದೇಶಗಳಲ್ಲಿ ಸಹ, ರೈಲು ಕಟ್ಟಡ ಕೆಲಸಕ್ಕೆಂದು ಬರುವ ಹೊರಗಿನವರು ಆದಿವಾಸಿ ಮಹಿಳೆಯರಿಗೆ ಲೈಂಗಿಕ ಕಿರುಕುಳ, ಲೈಂಗಿಕ ಶೋಷಣೆ ಮಾಡುವುದಲ್ಲದೇ, ಎಷ್ಟೋ ಬಾರಿ ಅತ್ಯಾಚಾರವೆಸಗಿದ್ದಾರೆ. ನಮ್ಮ ಪ್ರದೇಶಗಳ ಮಹಿಳೆಯರಿಗೆ ಹೊರಗಿನ ಶಕ್ತಿಗಳು ತಮ್ಮನ್ನು ನಾಶಮಾಡುವ ಶಕ್ತಿ ಹೊಂದಿವೆ ಎಂಬುದರ ಅರಿವಿದೆ. ಹಾಗಾಗಿ ಅವರು ಪ್ರತಿಭಟಿಸುವ ತಂತ್ರಗಳನ್ನು ಕಂಡುಕೊಂಡಿದ್ದಾರೆ. ಯಾವಾಗಾದರೂ ಪೊಲೀಸರು ಅಥವಾ ಕಂಪನಿಯವರು ಅಕ್ರಮವಾಗಿ ಹಳ್ಳಿಯೊಳಗೆ ಪ್ರವೇಶಿಸಿದ್ದಾರೆ ಎಂಬ ಸುದ್ದಿ ಹರುಡುತ್ತಲೇ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಅವರನ್ನು ಎದುರಿಸುತ್ತಾರೆ. ಇದಕ್ಕೆ ಒಂದು ಸ್ಪಷ್ಟವಾದ ಕಾರಣವೇನೆಂದರೆ ಗಂಡಸರು ಸಾಮಾನ್ಯವಾಗಿ ಹಳ್ಳಿಯಿಂದ ಹೊರಗಡೆಯೇ ಇರುತ್ತಾರೆ. ಹಾಗಿಲ್ಲದಿದ್ದಾಗ್ಯೂ ಸಹ ಮಹಿಳೆಯರೇ ಮೊದಲು ಪ್ರತಿಕ್ರಿಯೆಯನ್ನು ತೋರಿಸುವವರು. ಅಲ್ಲಿನ ಪುರುಷರು ಒಂದು ಪಕ್ಷ ತಮ್ಮನ್ನು ಕಂಪನಿಗಳಿಗೆ ಮಾರಿಕೊಂಡರೂ, ಹೆಂಗಸರು ಹಾಗೆ ಮಾಡುವುದಿಲ್ಲವೆಂಬ ಒಂದು ಭಾವನೆ ಎಲ್ಲರಲ್ಲಿ ಇದೆ.

ನಿರ್ಧಾರಗಳನ್ನು ಮಾಡುವ ಹಂತಗಳಲ್ಲಿ, ಕೆಲವೇ ಕೆಲವು ಮಹಿಳೆಯರಿದ್ದಾರೆ. ಸಾಮಾನ್ಯವಾಗಿ ವಯಸ್ಸಾದ ಮಹಿಳೆಯರು ಹೆಚ್ಚು ಚೆನ್ನಾಗಿ ಮಾತನಾಡುತ್ತಾರೆ. ಜೊತೆಗೆ ಹೋರಾಟದ ಮುಂಚೂಣಿಯಲ್ಲಿರುವ ಹೆಂಗಸರು 45 ವರ್ಷ ವಯಸ್ಸಾಗಿರುವವರು. ಯುವತಿಯರು ಸುದ್ದಿ ಹರಡುವುದರಲ್ಲಿ, ಚಾಡಿ ಹೇಳುವುದರಲ್ಲಿ ತುಂಬಾ ಚುರುಕಾಗಿರುತ್ತಾರೆ. ಮನೆ ಹಾಗೂ ಹಳ್ಳಿಯ ಬಂಧನಗಳಿಂದಾಗಿ ಅವರಿಗೆ ನಿಜವಾದ ಕೆಲವು ಮಿತಿಗಳಿವೆ. ಚಳುವಳಿಯ ಕೆಲಸಕ್ಕಾಗಿ ಗಂಡಸರ ತರಹ ಬೇರೆಯ ಹಳ್ಳಿಗಳಿಗೆ ಹೋಗುವುದಕ್ಕೆ ಅವರಿಗೆ ಸಾಧ್ಯವಾಗುವುದಿಲ್ಲ. ಹಾಗಾಗಿ ಅವರ ಭಾಗವಹಿಸುವಿಕೆಯೇ ಮಿತಿಯುಳ್ಳದ್ದಾಗಿದೆ. ಆದಾಗ್ಯೂ ಕೈ ಚಾಚಲಾಗುವಷ್ಟು ದೂರದವರೆಗಾದರೂ ಚಾಚಿಕೊಳ್ಳಬೇಕು ಎಂಬುದು ಅವರ ಸಾಮಾನ್ಯವಾದ ಆಲೋಚನೆಯಾಗಿದೆ.

ಜೊತೆಗೆ ಆತ್ಮ ವಿಶ್ವಾಸದ ಪ್ರಶ್ನೆಯೂ ಸಹ ಇದೆ. ಅವರಿಗೆ ಪರಿಚಿತವಿರುವ ಪ್ರದೇಶಗಳಲ್ಲಿ ಮಹಿಳೆಯರು ತುಂಬಾ ಆತ್ಮ ವಿಶ್ವಾಸದಿಂದಿರುತ್ತಾರೆ. ಹಳ್ಳಿಯ ಆವರಣ, ಡೊಂಗರ್ ಹಾಗೂ ಹತ್ತಿರದ ಕಾಡುಗಳು ಅವರಿಗೆ ಹೆಚ್ಚು ಪರಿಚಿತ. ಇಲ್ಲಿಂದ ಆಚೆ ಅವರು ಹೋಗುವುದಿಲ್ಲ ಹಾಗಾಗಿ ಪ್ರತಿಭಟನೆಯನ್ನು ಪರಿಚಿತ ಪ್ರದೇಶಗಳಿಂದ ಆಚೆಗೆ ತೆಗೆದುಕೊಂಡು ಹೋಗುವುದಿಲ್ಲ.

**ಪ್ರ : ಗಣಿಗಾರಿಕೆಯ ವಿರುದ್ಧದ ಹೋರಾಟ ಮಹಿಳೆಯರ ಚಲನವಲನದ ಮೇಲೆ ಯಾವ ರೀತಿ ಪ್ರಭಾವ ಉಂಟು ಮಾಡಿದೆ?**

ಖಂಡಿತವಾಗಿ ಪ್ರಭಾವ ಹೆಚ್ಚಾಗುತ್ತಿದೆ. ಹಿಂದೆ ಅವರಲ್ಲಿ ಮದುವೆಗಳು ಕೇವಲ ಆಯಾ ಹಳ್ಳಿಯ ಕುಟುಂಬಗಳಲ್ಲಿ ಮಾತ್ರ ಆಗುತ್ತಿದ್ದವು. ಇಲ್ಲವೇ ಕೊನೆಯ ಪಕ್ಷ ಒಂದು ಅಥವಾ ಎರಡು ಹಳ್ಳಿಗಳಿಗೆ ವಿಸ್ತರಿಸುತ್ತಿದ್ದವು. ಆದರೆ ಈಗ ಮದುವೆಗಳು ಅವರ ಕುಟುಂಬಗಳ ಮಧ್ಯೆಯೇ ಆದರೂ 50ರಿಂದ 60 ಕಿ.ಮೀ ದೂರದ ಹೊರಗಿನ ಪ್ರದೇಶಗಳಲ್ಲಿ ಮಾಡಿಕೊಳ್ಳುತ್ತಿದ್ದಾರೆ. ಅಲ್ಲದೇ ನಮ್ಮ ದಿನವಿಡೀ ರಸ್ತೆ ತಡೆ ಅಥವಾ ಮುತ್ತಿಗೆ ಕಾರ್ಯಕ್ರಮದಲ್ಲಿ ಬೇರೆ ಬೇರೆ ಕಡೆಯಿಂದ ಬಂದಂತ ಜನರು ಒಟ್ಟಿಗೆ ಸೇರುವುದರಿಂದ ಅವರವರಲ್ಲೇ ಮದುವೆ ಪ್ರಸ್ತಾಪಗಳು ಆಗಿ, ಮದುವೆ ಗೊತ್ತು ಪಡಿಸಿಕೊಂಡಿದ್ದಾರೆ. ರ್‍ಯಾಲಿಗಳು ನಡೆಯಬೇಕಾದರೆ ಹುಡುಗಿಯರು ಮತ್ತು ಹುಡುಗರು ಭೇಟಿಯಾಗುತ್ತಾರೆ. ಒಬ್ಬರನ್ನೊಬ್ಬರು ಇಷ್ಟಪಟ್ಟರೆ ಮದುವೆಗಳು ಆಗುತ್ತವೆ. ನಾವು ಈ ಬಗ್ಗೆ ಆಗಾಗ್ಗೆ ತಮಾಷೆ ಮಾಡುತ್ತಿರುತ್ತೇವೆ.

**ಪ್ರ : ಮಹಿಳಾ ಚಳುವಳಿಗಳ ಕುರಿತು ನಿಮ್ಮ ಅಭಿಪ್ರಾಯವೇನು ?**

ಮಹಿಳಾ ಚಳುವಳಿಗಳು ರೂಪುಗೊಂಡಿರುವುದು ಆದಿವಾಸಿಗಳು ಇಲ್ಲದಂತಹ ಸ್ಥಳಗಳಲ್ಲಿ. ಅದೂ ಸಾಮಾನ್ಯವಾಗಿ ಮೇಲ್ವರ್ಗದ ಅಥವಾ ಮಧ್ಯಮ ವರ್ಗದ, ನಗರದ ಮಹಿಳೆಯರ ಸಮಸ್ಯೆಗಳನ್ನೇ ಕೈಗೆತ್ತಿಕೊಂಡಿದೆ. ವರದಕ್ಷಿಣೆ, ಪತ್ನಿಯನ್ನು ಹಿಂಸಿಸುವುದು ಇತ್ಯಾದಿ. ಆದಿವಾಸಿ ಹೆಂಗಸರ ಸಮಸ್ಯೆಗಳನ್ನು ಮಹಿಳಾ ಚಳುವಳಿ ತೆಗೆದುಕೊಂಡಿಲ್ಲ. ಆದರೆ ಈಗ ಸ್ವಲ್ಪ ಬದಲಾವಣೆಗಳಾಗುತ್ತಿವೆ.

ಆದಿವಾಸಿ ಮಹಿಳೆಯರ ಸಮಸ್ಯೆಗಳನ್ನು ಅವರು ಏನು ಎಂಬ ಹಿನ್ನಲೆಯಲ್ಲಿಯೇ ನೋಡಬೇಕಾಗುತ್ತದೆ. ವರದಕ್ಷಿಣೆ ಸಾವು, ಹೆಂಡತಿಯನ್ನು ಹೊಡೆಯುವುದು ಮುಂತಾದ ಪಿತೃ ಪ್ರಧಾನತೆಯ ಶೋಷಣೆಯ ಕ್ರೌರ್ಯ ಮುಖಗಳು. ಆದಿವಾಸಿ ಸಮುದಾಯಗಳಲ್ಲಿ ಇವು ಇಲ್ಲ. ಅವರಿಗೂ ಕೆಲವು ಸಮಸ್ಯೆಗಳಿವೆ. ಭೂಮಿ ಹಕ್ಕು ಇಲ್ಲ, ಮನೆಗಳಲ್ಲಿ ಹಕ್ಕು ಇಲ್ಲ, ಗಂಡಸರು ಬೆಳೆಗಳನ್ನು ಕಿತ್ತುಕೊಂಡು ಸಾರಾಯಿಗೋಸ್ಕರ ಮಾರಬಹುದು. ಹೆಂಗಸರಿಗೆ ಸಮುದಾಯದ ಒಳಗೇ ಗಟ್ಟಿಯಾದ ಧ್ವನಿ ಇದೆ. ಒಬ್ಬ ಗಂಡಸು ತಪ್ಪು ಮಾಡುತ್ತಿದ್ದಾನೆಂದು ಅವರಿಗೆ ಅನ್ನಿಸಿದರೆ, ಅವರು ಒಟ್ಟಾಗಿ ಆತನನ್ನು ಹೊಡೆಯಬಲ್ಲವರಾಗಿದ್ದಾರೆ. ನಾನು ಈ ರೀತಿಯ ಒಂದು ಗಲಾಟೆಯನ್ನು ಸ್ವತಃ ನೋಡಿದ್ದೇನೆ. ಒಬ್ಬ ಗಂಡಸು ತನ್ನ ನೆರೆಯವರೊಡನೆ ಯಾವುದೋ ಸಮಸ್ಯೆಗೆ ಜೋರಾಗಿ ರೇಗಾಡುತ್ತಿದ್ದ. ಆತನ ಹೆಂಡತಿ ಹೊರಗೆ ಬಂದು ಈ ಬಗ್ಗೆ ವಿಚಾರಿಸಿ ಅವನನ್ನು ಸಮಾಧಾನ ಮಾಡಲು ಪ್ರಯತ್ನಿಸಿದಳು. ಸ್ವಲ್ಪ ಸಮಯದ ನಂತರ ಬೇರೆ ಹೆಂಗಸರೂ ಬಂದು ಒಟ್ಟಾದರು. ಆ ಮನುಷ್ಯ ಸಕಾರಣದಿಂದ ವರ್ತಿಸಲು ಸಮ್ಮತಿಸದಿದ್ದಾಗ ಅವರೆಲ್ಲ ಒಟ್ಟಾಗಿ ಸೇರಿ ಅವನನ್ನು ಚೆನ್ನಾಗಿ ಥಳಿಸಿದರು. ಇಂತಹದನ್ನ ಆದಿವಾಸಿಗಳಲ್ಲದವರಲ್ಲಿ ನಾವು ಕಾಣಲಾಗುವುದಿಲ್ಲ.

ಈ ಮಹಿಳೆಯರ ನಿಜವಾದ ಸಮಸ್ಯೆ ಇರುವುದು ಆರೋಗ್ಯ ಸೌಲಭ್ಯ ಇಲ್ಲದಿರುವುದು, ನೀರು, ಶಿಕ್ಷಣದ ಕೊರತೆ. ಇವು ಮಹಿಳೆಯರಿಗೆ ಅತ್ಯಂತ ಮುಖ್ಯವಾದವುಗಳು. ಇವುಗಳ ಕೊರತೆ-ಮಹಿಳೆಯರು ಇನ್ನೂ ಹೆಚ್ಚು ಹೊರೆ ಹೊರುವಂತಾಗಿದೆ. ಪರ್ಯಾಯ ನೀರು, ಆರೋಗ್ಯ, ಶಿಕ್ಷಣದ ಅಭಿವೃದ್ಧಿಗೆ ಅರಿವು ಮೂಡಿಸಲು ನಾವು ಇತರರ ಸಹಾಯ ಪಡೆಯಬೇಕಿದೆ. ಈ ಸಹಾಯ ನಮ್ಮ ಕರಾರುಗಳ ಮೇಲೆಯೇ ಇರಬೇಕಾಗುತ್ತದೆ ಹಾಗೂ ಹೊರಗಿನವರ ಮೇಲೆ ಅವಲಂಬನೆಯನ್ನು ಹೆಚ್ಚಿಸಬಾರದು.

**ಪ್ರ : ನಿಮಗೆ ತಿಳಿದಿರುವ ಹಾಗೆ ಮಹಿಳಾ ಚಳುವಳಿಯ ಒಂದು ಬೇಡಿಕೆ ಲಿಂಗಾಧಾರಿತ ನ್ಯಾಯಬದ್ಧ ಕಾನೂನುಗಳ ಕುರಿತಾದ್ದು. ದುರದೃಷ್ಟವಶಾತ್ ಸಂಘ ಪರಿವಾರದವರೂ ಸಹ ಏಕ ನಾಗರಿಕ ಸಂಹಿತೆಗಾಗಿ ಬೇಡಿಕೆ ಇತ್ತಿದ್ದಾರೆ. ಆದರೆ ಅವು ಲಿಂಗಾಧಾರಿತ ಕಾನೂನುಗಳಿಗೆ ವಿರುದ್ಧವಾಗಿವೆ. ಇದರ ಬಗ್ಗೆ ಪ್ರಾಕೃತಿಕ ಸಂವಾದ್ ಸುರಕ್ಷಾ ಪರಿಷತ್‌ನ ನಿಲುವೇನು ?**

ನಮ್ಮ ಕಡೆ ಎಲ್ಲಾ ಜಾತಿ ಅಥವಾ ಬುಡಕಟ್ಟುಗಳೂ ಅವರದೇ ಆದಂತಹ ಕಾನೂನುಗಳನ್ನು ಹೊಂದಿವೆ. ಋತುಮತಿಯಾಗುವುದರಿಂದ ಹಿಡಿದು ಮದುವೆಯವರೆಗೆ ಇವುಗಳು ಕ್ರೋಡೀಕೃತಗೊಂಡಿಲ್ಲ. ಈ ಕಾನೂನುಗಳು ವೈವಿಧ್ಯಮಯವಾಗಿವೆ.

ಕೊಂಡ ಬುಡಕಟ್ಟಿಗೆ ಸೇರಿದ ಒಂದು ಹುಡುಗಿ ಋತುಮತಿಯಾದಾಗ, ಅಲ್ಲಿ ಯಾವುದೇ ರೀತಿಯ ಗುಲ್ಲೆಬ್ಬಿಸುವುದಿಲ್ಲ. ತಂದೆ-ತಾಯಿ ಜಾತಕ ನೋಡುವ

ದಿಸಾರಿಗೆ (ಪುರೋಹಿತರಿಗೆ) ಹೇಳುತ್ತಾರೆ. ನಕ್ಷತ್ರಗಳೇನಾದರೂ ಸರಿ ಇಲ್ಲದಂತೆ ಕಂಡರೆ, ಊರ ದೇವತೆಗೆ ಏನಾದರೂ ಮಾಡುವಂತೆ ಆತ ಸಲಹೆ ಮಾಡುತ್ತಾನೆ. ಅದೇ ಜೋಡಿಯಾ ಬುಡಕಟ್ಟು ಜನಾಂಗದಲ್ಲಿ ಅನೇಕ ಧಾರ್ಮಿಕ ವಿಧ್ಯುಕ್ತ ರೂಢಿಗಳು ಜಾರಿಯಲ್ಲಿವೆ. ಅವರಲ್ಲಿ ಒಬ್ಬ ಹುಡುಗಿ ಋತುಮತಿಯಾದರೆ, ಇಡೀ ಹಳ್ಳಿಗೇ ಜೌತಣ ನೀಡಬೇಕು ಹಾಗೂ ಹಲವು ಧಾರ್ಮಿಕ ವಿಧಿ ವಿಧಾನಗಳನ್ನು ಅನುಸರಿಸಬೇಕು.

ಕೊಂಡಸ್ ಜನಾಂಗದಲ್ಲಿ ಋತುಸ್ರಾವದ ಮಹಿಳೆಯರು ಯಾವುದೇ ರೀತಿಯ ಕಟ್ಟುಪಾಡುಗಳನ್ನು ಎದುರಿಸುವುದಿಲ್ಲ. ಬೇರೆ ದಿನದ ಹಾಗೆ ಆ ದಿನಗಳಲ್ಲೂ ಎಲ್ಲರಿಗೂ ಅಡುಗೆ ಮಾಡುತ್ತಾರೆ. ಜೋಡಿಯಾಸ್ ಜನಾಂಗದಲ್ಲಿ ಮುಟ್ಟಾದ ಮಹಿಳೆ ಅಡುಗೆ ಮನೆಗೆ ಹೋಗುವ ಹಾಗೆ ಇಲ್ಲ. ಆಕೆಯ ಗಂಡ ಮೂರು ದಿನದವರೆಗೆ ಅಡುಗೆ ಮಾಡಿ ಹಾಕುತ್ತಾನೆ. ಕಟ್ಟುಪಾಡುಗಳ ಹೊರತಾಗಿಯೂ ಸಹ ಹೆಂಗಸರಿಗೆ ವಿಶ್ರಾಂತಿ ಸಿಗುತ್ತದೆ.

ಇನ್ನೂ ಹಲವಾರು ರೀತಿಯ ಕಟ್ಟುಪಾಡುಗಳನ್ನು ಆದಿವಾಸಿಗಳು ಅನುಸರಿಸುತ್ತಾರೆ. ಅವುಗಳು ಜನಾಂಗದಿಂದ ಜನಾಂಗಕ್ಕೆ ಬೇರೆ ಬೇರೆ ಆಗುತ್ತಾ ಹೋಗುತ್ತವೆ.

ಸರ್ಕಾರ ಯಾವುದೇ ತರಹದ ಬದಲಾವಣೆಗಳನ್ನು ತಂದರೂ ನಾವು ಅನುಮಾನಿಸುತ್ತೇವೆ. ಏಕೆಂದರೆ ಹೊಸ ವ್ಯವಸ್ಥೆಯನ್ನು ಹಿಡಿತದಲ್ಲಿ ಇಟ್ಟುಕೊಳ್ಳುವವರು ಯಾರು? ಹೊರಗಿನಿಂದ ಏನೇ ಬಂದರೂ ನಮಗೆ ಅನುಮಾನ. ಏಕೆಂದರೆ ಹೊರ ಪ್ರಪಂಚದವರು ನಮಗಿಂತ ಬಲಾಢ್ಯರು. ನಮ್ಮ ಅನುಭವದಿಂದ ನಮಗೆ ಅರ್ಥವಾಗಿದೆ. ಯಾವುದೇ ಬದಲಾವಣೆಯಾದಾಗ್ಯೂ ಯಾರು ಬಲಾಢ್ಯರೋ ಅಂತವರು ಬದಲಾವಣೆಯ ಅನುಕೂಲತೆಗಳನ್ನು ಪಡೆಯುತ್ತಾರೆ. ನಾಗರಿಕ ಕಾನೂನಿನ ಸಮಾನತೆ ಎಂದರೆ ಬಲಾಢ್ಯರಿಗೆ ಸಮಾನತೆ ಎಂದೇ ಅರ್ಥ. ಬೇರೆಯ ಕಾನೂನುಗಳಲ್ಲಿ, ಕ್ರಿಮಿನಲ್ ಕಾಯಿದೆಗಳನ್ನೂ ಸೇರಿಸಿ ನಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದು ನಮಗೆ ತಿಳಿದಿದೆ, ಕ್ರಿಮಿನಲ್ ಕಾಯಿದೆ ಎಲ್ಲರಿಗೂ ಒಂದೇ. ಆದರೆ ಬಲಾಢ್ಯರು ಕಾನೂನುಗಳ ಜಾಳು ಜಾಳನ್ನು ತಮ್ಮ ಅನುಕೂಲಗಳಿಗೆ ಚನ್ನಾಗಿ ಬಳಸಿಕೊಳ್ಳುತ್ತಾರೆ. ಆದರೆ ಬಡವರು ಹಾಗೂ ಅಸಹಾಯಕರು ಮಾತ್ರ ಬಲಿಪಶುಗಳಾಗುತ್ತಾರೆ.

## ಆದಿವಾಸಿ ಗೋತ್ರ ಮಹಾಸಭಾದ ಸಿ.ಕೆ.ಜಾನು ಅವರೊಂದಿಗೆ ಸಂದರ್ಶನ

**ಪ್ರ : ಆದಿವಾಸಿ ಗೋತ್ರ ಮಹಾಸಭಾದ ಹೋರಾಟದಲ್ಲಿ ಮಹಿಳೆಯರ ಪಾತ್ರವೇನು ?**

ನಮ್ಮ ಈ ಹೋರಾಟದಲ್ಲಿ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ. ನಮ್ಮ ಎಲ್ಲಾ ವಿರೋಧಿ ಚಟುವಟಿಕೆಗಳಲ್ಲಿ ಮಹಿಳೆಯರೇ ಹೆಚ್ಚು ಸಂಖ್ಯೆಯಲ್ಲಿ ಬರುತ್ತಾರೆ. ಮಹಿಳೆಯರು ಸ್ಪಷ್ಟವಾದ ನಿಲುವು ತೆಗೆದುಕೊಳ್ಳುತ್ತಾರೆ ಹಾಗೂ ಚಳುವಳಿಯಲ್ಲಿ ಅವರು ಹೆಚ್ಚು ಕ್ರಿಯಾಶೀಲರಾಗಿದ್ದಾರೆ.

ಆದಿವಾಸಿ ಗೋತ್ರ ಮಹಾಸಭಾ ಏನೇ ಆದರೂ ಪುರುಷರು ಹಾಗೂ ಸ್ತ್ರೀಯರನ್ನು ಪ್ರತ್ಯೇಕಿಸಿ ನೋಡುವುದಿಲ್ಲ. ನಮ್ಮ ಹೋರಾಟ ಪುರುಷ ಹಾಗೂ ಮಹಿಳೆಯರನ್ನೊಳಗೊಂಡ ಹೋರಾಟ. ನಾವು ಸಮುದಾಯದ ಮಹಿಳೆ ಹಾಗೂ ಪುರುಷ ಇಬ್ಬರೊಂದಿಗೂ ಸಂಪರ್ಕ ಹೊಂದಿದ್ದೇವೆ. ಪುರುಷರು ಶೋಷಿಸುವ ಘಟನೆಗಳು ಕಡಿಮೆ ಹಾಗೇನಾದರೂ ಆದಲ್ಲಿ ಆದಿವಾಸಿ ಗೋತ್ರ ಮಹಾಸಭಾ ಅಂತಹವುಗಳನ್ನು ತಡೆಯುತ್ತದೆ ಹಾಗೂ ಪುರುಷರನ್ನು ಸರಿ ಪಡಿಸುತ್ತೇವೆ.

ನಮ್ಮ ಸಾಂಸ್ಥಿಕ ಸ್ವರೂಪದಲ್ಲಿಯೂ ಪುರುಷ ಹಾಗೂ ಮಹಿಳೆಯರಿಗೆ ಸಮಾನ ಪ್ರಾತಿನಿಧ್ಯವಿದೆ. ಇಲ್ಲಿ ಅಧಿಕಾರದ ಆರು ಸ್ಥಾನಗಳಿವೆ ಎಂದರೆ ಮೂರನ್ನು ಪುರುಷರಿಗೆ ಹಾಗೂ ಮೂರನ್ನು ಮಹಿಳೆಯರಿಗೆ ನೀಡಲಾಗುತ್ತದೆ.

ಆದಿವಾಸಿ ಸಮಾಜದಲ್ಲಿ ಹೆಂಗಸರು ಅವಮಾನ, ಶೋಷಣೆ, ಅಧೀನತೆಯನ್ನು ಅನುಭವಿಸುವುದಿಲ್ಲ. ನಿಜವೆಂದರೆ ಆದಿವಾಸಿ ಗಂಡಸರು ಮನೆಗೆಲಸದಲ್ಲಿ ಪಾಲ್ಗೊಳ್ಳುತ್ತಾರೆ. ಯಾರಾದರೂ ಮಹಿಳೆ ಹೋರಾಟದಲ್ಲಿ ಪಾಲ್ಗೊಳ್ಳಲು ಹೋದರೆ, ಆಕೆಯ ಗಂಡ ಮಕ್ಕಳನ್ನು ನೋಡಿಕೊಳ್ಳಲು ಮನೆಯಲ್ಲಿ ಉಳಿದುಕೊಳ್ಳುತ್ತಾನೆ.

**ಪ್ರ : ನಿಮ್ಮದು ಆದಿವಾಸಿಗಳ ಭೂ ಒಡೆತನ ಹಾಗೂ ಭೂಮಿಯ ಮೇಲಿನ ಹಕ್ಕುಗಳಿಗಾಗಿ ನಡೆಸುತ್ತಿರುವ ಹೋರಾಟ. ನಿಮ್ಮ ಬೇಡಿಕೆಗಳನ್ನು ಕುರಿತು ಹೇಳುವಿರಾ ?**

ಸಾಂಪ್ರದಾಯಕವಾಗಿ ಆದಿವಾಸಿಗಳ ಮಧ್ಯೆ ಭೂ ಒಡೆತನದಂತಹ ಕಲ್ಪನೆಯೇ ಇಲ್ಲ. ಆದಿವಾಸಿ ಸಮುದಾಯಗಳು ಚಾರಿತ್ರಿಕವಾಗಿ ಭೂಮಿಯ ಮೇಲೆ ಸಮುದಾಯದ ಹಕ್ಕನ್ನು ಹೊಂದಿದ್ದಾರೆ. ಆದರೆ ಇಂದು ನಮ್ಮ ಹುಟ್ಟಿದ ನೆಲದಿಂದ ನಮ್ಮನ್ನು ದೂರ ತಳ್ಳಲಾಗುತ್ತಿದೆ ಭೂಮಿಯನ್ನು ಕಸಿದುಕೊಳ್ಳಲಾಗುತ್ತಿದೆ. ನಮ್ಮ ಜೀವನಾಧಾರಕ್ಕೆ ಇಲ್ಲಿ ಸ್ಥಳವಿಲ್ಲವಾಗಿದೆ ಆದ್ದರಿಂದ ನಮ್ಮಿಂದ ಅನ್ಯಾಯವಾಗಿ ಕಿತ್ತುಕೊಂಡ ನಮ್ಮ ಭೂಮಿಯ ಮೇಲಿನ ಹಕ್ಕು ಹಾಗೂ ಸ್ವಾಧೀನತೆಗಾಗಿ ನಾವು ಈ ದಿನ ಹೋರಾಟ ನಡೆಸುತ್ತಿದ್ದೇವೆ.

**ಪ್ರ : ಈ ಭೂಮಿ ನಿಮ್ಮದಾದರೆ, ಇದು ಹೇಗೆ ಹಂಚಲ್ಪಡಬೇಕು ಎಂಬುದು ನಿಮ್ಮ ಬೇಡಿಕೆಯಾಗುತ್ತದೆ ? ಯಾರು ಇದರ ಸ್ವಾಧೀನತೆ ಹೊಂದುತ್ತಾರೆ ?**

ನಾವು ಪ್ರತಿ ಆದಿವಾಸಿ ಕುಟುಂಬಗಳಿಗಾಗಿ ಭೂಮಿಯನ್ನು ಕೇಳುತ್ತಿದ್ದೇವೆ. ನಾವು ಕೇಳುತ್ತಿರುವ ಭೂಮಿಯನ್ನು ಆಯಾ ಕುಟುಂಬದ ಪುರುಷ, ಮಹಿಳೆಯರಿಗೆ ಜಂಟಿಯಾಗಿ ಪಟ್ಟ ನೀಡಬೇಕೆಂಬುದು ನಮ್ಮ ಬೇಡಿಕೆಯಾಗುತ್ತದೆ.

**ಪ್ರ : ಆದಿವಾಸಿ ಗೋತ್ರ ಮಹಾ ಸಭಾ ಮಹಿಳಾ ಚಳುವಳಿ -ಯ ಜೊತೆಗೆ ಯಾವ ರೀತಿಯ ಸಂಬಂಧ ಹೊಂದಿದೆ ?**

ಕೇರಳದಲ್ಲಿ ಮಹಿಳಾ ಗುಂಪುಗಳು ನಡೆಸುತ್ತಿರುವ ಸಭೆ, ಕಾರ್ಯಕ್ರಮ, ಹೋರಾಟಗಳಲ್ಲಿ ಇತ್ತೀಚಿನ ದಿನಗಳಲ್ಲಿ ನಾನು ಭಾಗವಹಿಸುತ್ತಿದ್ದೇನೆ. ಈ ಗುಂಪುಗಳ ಬಗ್ಗೆ ನನ್ನ ಆರೋಪವೇನೆಂದರೆ ಅವರು ಮಧ್ಯಮ ವರ್ಗದ, ನಗರದ ಮಹಿಳೆಯರು ಎದುರಿಸುವ ಸಮಸ್ಯೆಗಳನ್ನು ತೆಗೆದುಕೊಳ್ಳುತ್ತಾರೆ. ಅವರು ಆದಿವಾಸಿ ಸಮಸ್ಯೆಗಳಿಗೆ ಪ್ರತಿಕ್ರಿಯಿಸುವುದು ಕಡಿಮೆ. ಆದಿವಾಸಿ ಮಹಿಳೆಯರೂ ನಿತ್ಯ ಅತ್ಯಾಚಾರಕ್ಕೊಳಗಾಗುತ್ತಾರೆ, ಶೋಷಣೆಗೊಳಗಾಗುತ್ತಾರೆ. ಮಹಿಳಾ ಸಂಘಟನೆಗಳು ಈ ಸಮಸ್ಯೆಗಳಿಗೆ ಸಾಮಾನ್ಯವಾಗಿ ಪ್ರತಿಕ್ರಿಯಿಸುವುದಿಲ್ಲ.

ರಾಜಕೀಯ ಬದಲಾವಣೆ ತರುವಲ್ಲಿ ಮಹಿಳೆಯರಿಗೆ ಅಸಾಮಾನ್ಯವಾದ ಸಾಮರ್ಥ್ಯವಿದೆಯೆಂದು ನಾವು ನಂಬುತ್ತೇವೆ. ಇತರೇ ಶಕ್ತಿಗಳಿಗೆ ಹೆಂಗಸರು ಅಡಿಯಾಳಾಗುವುದಿಲ್ಲ. ಪುರುಷರು ಬೇಗ ಆಮಿಷಗಳಿಗೆ ಒಳಗಾಗುತ್ತಾರೆ. ಸಾರಾಯಿ, ಲಂಚಗಳಂತಹ ದೌರ್ಬಲ್ಯಗಳಿಗೆ ಪುರುಷರು ಬಲಿಯಾಗುತ್ತಾರೆ. ಮಹಿಳೆಯರಿಗೆ ಇಂತಹ ಪ್ರಲೋಭಗಳಿಂದ ದೂರವಿರುವಷ್ಟು ಸಾಮಾರ್ಥ್ಯವಿರುತ್ತದೆ ಮತ್ತು ಧೃಡವಾಗಿರುತ್ತಾರೆ.

ಪುರುಷ ಹಾಗೂ ಮಹಿಳೆಯರನ್ನು ವಿಂಗಡಿಸುವುದರಿಂದ ನಮ್ಮ ಸಮಸ್ಯೆಗಳನ್ನು ಪರಿಹರಿಸುವುದು ಸಾಧ್ಯವಿಲ್ಲ. ಬದಲಾಗಿ ಇಂತಹ ನಿಲುವಿನಿಂದ ಮಹಿಳೆ ಮತ್ತು ಪುರುಷರ ಮಧ್ಯೆ ಸಮರ ಪ್ರಾರಂಭವಾಗಿ ಚಳುವಳಿ ದುರ್ಬಲವಾಗುತ್ತದೆ. ನಿಜವೆಂದರೆ ಇಂತಹ ಸಂದರ್ಭದಲ್ಲಿ ಪ್ರಭುತ್ವವು ಇದರ ಪ್ರಯೋಜನವನ್ನು ಪೂರ್ಣವಾಗಿ ಪಡೆದುಕೊಂಡು ಪುರುಷ ಮತ್ತು ಮಹಿಳೆಯರ ಮಧ್ಯೆ ಇನ್ನಷ್ಟು ಬಿರುಕು ತರಲು ಪ್ರಯತ್ನಿಸುತ್ತದೆ. ಪುರುಷರನ್ನು ಬದಲಾವಣೆಗೆ ಒಪ್ಪಿಸಿದಾಗ ಮಾತ್ರ ಮಹಿಳೆಯರ ಸಮಸ್ಯೆಗಳ ಪರಿಹಾರ ಸಾಧ್ಯ.

**ಪ್ರಾ : ಏಕರೂಪವಾದ ನ್ಯಾಯಯುತ ಲಿಂಗತ್ವ ಕಾನೂನುಗಳ ಬೇಡಿಕೆ ಬಗ್ಗೆ ಆದಿವಾಸಿ ಗೋತ್ರ ಮಹಾಸಭಾದ ನಿಲುವೇನು ?**

ಈ ಬೇಡಿಕೆಯನ್ನಿಟ್ಟಿರುವುದು ಮಧ್ಯಮ ವರ್ಗದ ಮಹಿಳೆಯರನ್ನು ದೃಷ್ಟಿಯಲ್ಲಿಟ್ಟುಕೊಂಡು. ಆದಿವಾಸಿ ಮಹಿಳೆಯರನ್ನಲ್ಲ. ಮಧ್ಯಮ ವರ್ಗದ ಮಹಿಳೆಯರು ಯಾವ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ? ವರದಕ್ಷಿಣೆ, ಹೆಂಡತಿಯರನ್ನು ಹೊಡೆಯುವುದು, ವೈಯಕ್ತಿಕ ಹಾಗೂ ಸಾರ್ವಜನಿಕ ಜೀವನದ ಮಧ್ಯೆ ಇರುವ ಸಂಘರ್ಷ. ಈ ಸಮಸ್ಯೆಗಳು ಆದಿವಾಸಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳಲ್ಲ.

**ಪ್ರ : ಆರ್ಥಿಕ ಅನುದಾನ (Funding) ತೆಗೆದುಕೊಳ್ಳುವ ಬಗ್ಗೆ ಆದಿವಾಸಿ ಗೋತ್ರ ಮಹಾಸಭಾದ ನಿಲುವೇನು ?**

ಆರ್ಥಿಕ ಅನುದಾನದ ಬಗ್ಗೆ ಮಾತನಾಡುವುದರಿಂದ ನಾವೇನೋ ಲಾಭ ಪಡೆಯುತ್ತೇವೆ ಎಂದು ನಮಗನ್ನಿಸುವುದಿಲ್ಲ. ಆದಿವಾಸಿ ಹೋರಾಟದ ಸಂದರ್ಭದಲ್ಲಿ ಆರ್ಥಿಕ ಅನುದಾನ ಗುಂಪು ಒಡೆಯುವ ಕೆಲಸವನ್ನೇ ಮಾಡಿದೆ. ಇದನ್ನು ಇತರ ಪ್ರದೇಶಗಳಲ್ಲಿಯೂ ಕೂಡಾ ಕಾಣಬಹುದಾಗಿದೆ. ನಾಗಾಲ್ಯಾಂಡಿನ ನಾಗಾಸ್ ಹಾಗೂ ಕುಕೇಸ್ ವಿಚಾರದಲ್ಲೂ ಇದನ್ನು ಕಾಣಬಹುದಾಗಿದೆ. ಈ ಎರಡು ಗುಂಪಿನ ಮಧ್ಯೆ ಇರುವ ಮನಸ್ತಾಪಗಳನ್ನು ಸರ್ಕಾರ ಬಳಸಿಕೊಂಡು ಒಂದರ ವಿರುದ್ಧ ಇನ್ನೊಂದಕ್ಕೆ ಅನುದಾನ ನೀಡುವ ಮೂಲಕ ಒಟ್ಟು ಹೋರಾಟವನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿದೆ.

ಆದಿವಾಸಿಗಳ ಹೆಸರಿನಲ್ಲಿ ಹಣ ತೆಗೆದುಕೊಂಡು ತಮ್ಮ ಅಭಿವೃದ್ಧಿ ಮಾಡಿಕೊಂಡಿರುವವರನ್ನು ನಾವು ಕಾಣುತ್ತೇವೆ. ಈ ಎಲ್ಲಾ ಆರ್ಥಿಕ ಅನುದಾನ ಸಂಸ್ಥೆಗಳು ಸರ್ಕಾರೇತರ ಅಥವಾ ಇತರೇ ಮಧ್ಯವರ್ತಿಗಳಿಲ್ಲದೇ ನೇರವಾಗಿ ಹೋರಾಟಗಳನ್ನು ಬಲಪಡಿಸುವುದಕ್ಕೆ ಆರ್ಥಿಕ ಸಹಾಯ ನೀಡಬೇಕು ಎಂದು ನಾವು ಒಂದು ಪಕ್ಷ ಬೇಡಿಕೆ ಇತ್ತರೆ ಎಲ್ಲಾ ಆರ್ಥಿಕ ಅನುದಾನಗಳೂ ತಕ್ಷಣವೇ ನಿಂತುಹೋಗಿ ಬಿಡುತ್ತವೆ.

**ಪ್ರ : ನೀವು ಕೈಗೊಳ್ಳಬೇಕೆಂದಿರುವ ಕಾರ್ಯಕ್ರಮಗಳ ಯೋಜನೆಯ ಬಗ್ಗೆ ತಿಳಿಸುವಿರಾ ?**

ಸೆಪ್ಟೆಂಬರ್ 21 ರಂದು ನಾವು ದೊಡ್ಡ ಪ್ರಮಾಣದಲ್ಲಿ ಪ್ರಕೃತಿ-ಪುನರುಜ್ಜೀವನದ ಕಾರ್ಯಕ್ರಮಕ್ಕಾಗಿ ಆದಿವಾಸಿ-ಗಳನ್ನು ಸಂಘಟಿಸುತ್ತಿದ್ದೇವೆ. ನಿಮಗೆ ಗೊತ್ತಿರುವ ಹಾಗೆ ಸರ್ಕಾರವು ಕೇರಳದಲ್ಲಿ ಪ್ರವಾಸಿ ತಾಣಗಳನ್ನು ಹೆಚ್ಚು ಹೆಚ್ಚು ಅಭಿವೃದ್ಧಿಗೊಳಿಸ ತೊಡಗಿದೆ. ಅದೇ ಸಂದರ್ಭದಲ್ಲಿ ಸಂಪದ್ಭರಿತವಾದ ಆದಿವಾಸಿ ಕಾಡು ಪ್ರದೇಶಗಳನ್ನು ತಮ್ಮ ಏಕಮುಖ ಸಂಸ್ಕೃತಿ ಹಾಗು ಕಾಡು ನಾಶಮಾಡುವ ಕ್ರಮದಿಂದ ಬಂಜರು ಭೂಮಿಗಳನ್ನಾಗಿ ಮಾಡುತ್ತಿವೆ.

ಮುತಂಗಾದಲ್ಲಿ ನಾವು ಐದು ಎಕರೆ ಭೂಮಿಯನ್ನು ತೆಗೆದುಕೊಂಡು ಅದನ್ನು ಪ್ರಾಕೃತಿಕವಾಗಿ ಸಂಪದ್ಭರಿತವಾಗಿ

ಮಾಡಲು ಯೋಜಿಸುತ್ತಿದ್ದೇವೆ. ನಾವು ಈ ಭೂಮಿಯನ್ನು ಉತ್ತುತ್ತೇವೆ ಹಾಗೂ ಗಿಡಗಳನ್ನು, ಮರಗಳನ್ನು ಬೆಳೆಸುತ್ತೇವೆ. ಇಡೀ ಭೂಮಿಯನ್ನು ಮತ್ತೊಮ್ಮೆ ಜೀವಂತವಾಗಿರಿಸಲು ನಾವು ಪ್ರಯತ್ನಿಸುತ್ತೇವೆ.

ಸಂಕುಚಿತ ಅರ್ಥದಲ್ಲಿ ಇದು ಆದಿವಾಸಿ ಕಾರ್ಯಕ್ರಮವಲ್ಲ ಎಂಬುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಇದು ಜನರ ಕಾರ್ಯಕ್ರಮ ಇದರಲ್ಲಿ ಆದಿವಾಸಿಗಳು ನಾಯಕತ್ವ ವಹಿಸಿದ್ದಾರೆ. ನಾವು ಭೂಮಿ ಹಾಗೂ ನದಿಗಳನ್ನು ಮತ್ತೆ ಕಾಯ್ದುಕೊಂಡರೆ, ಜೀವಂತವಾಗಿರಿಸದರೆ ಇದು ನಮಗೆ ಮಾತ್ರವಲ್ಲ, ಇಡಿಯ ಮಾನವ ಕುಲಕ್ಕೆ ಒಳ್ಳೆಯದಾಗುತ್ತದೆ. ವಾಯುಮಾಲಿನ್ಯ ಇಲ್ಲವಾದರೆ ಇದು ನಮಗೆ ಮಾತ್ರವಲ್ಲ ಎಲ್ಲರೂ ಸರಾಗವಾಗಿ ಉಸಿರಾಡಲು ಶುದ್ಧ ಗಾಳಿಯನ್ನು ಒದಗಿಸುತ್ತದೆ. ನಾವು ಉಳುಮೆ ಮಾಡುವಾಗ ರಾಸಾಯನಿಕ ಹಾಗೂ ಕ್ರಿಮಿನಾಶಕಗಳನ್ನು ಉಪಯೋಗಿಸದೇ ಮಾಡುತ್ತೇವೆ. ನಾವು ಉತ್ಪಾದಿಸುವ ಆಹಾರ ಎಲ್ಲರಿಗಾಗಿ ಮಾರ್ಕೆಟ್‌ನಲ್ಲಿ ದೊರೆಯುತ್ತಿದೆ. ಎಲ್ಲರೂ ಆರೋಗ್ಯಯುತವಾದ ಸಾವಯವ (Organic) ಆಹಾರವನ್ನು ಹೊಂದಬಹುದಾಗಿದೆ.

ಪ್ರಕೃತಿ ಹಾಗೂ ಭೂಮಿಯನ್ನು ಗೌರವಿಸುವುದರ ಮೇಲೆ ನಮ್ಮ ಜೀವನ ಶೈಲಿ ಅವಲಂಭಿತವಾಗಿದೆ. ಆದಿವಾಸಿಗಳು ಸಾಂಪ್ರದಾಯಕವಾದ ಬುದ್ಧಿವಂತಿಕೆಯನ್ನು ಹೇರಳವಾಗಿ ಸಂಗ್ರಹಿಸಿಟ್ಟುಕೊಂಡಿದ್ದಾರೆ. ಆದರೆ ಹೊರಗಿನ ಪ್ರಪಂಚ ಇದಕ್ಕೆ ಕುರುಡಾಗಿದೆ. ಹೊರಗಿನ ಪ್ರಪಂಚ ಅವರ ಅಹಂಕಾರದಿಂದ ಕುರುಡಾಗಿದೆ ಮತ್ತು ಈ ಅಹಂಕಾರದಿಂದಲೇ ಆದಿವಾಸಿಗಳನ್ನು ಕೀಳೆಂದು ಭಾವಿಸುತ್ತಾರೆ. ಅವರನ್ನು ಸಮಾಜದ ಪ್ರಧಾನ ಸಂಸ್ಕೃತಿಯ, ಮುಖ್ಯವಾಹಿನಿಯ ಭಾಗವಾಗಿಸಬೇಕೆಂದು ನಂಬುತ್ತಾರೆ. ಸಮಾಜವಾದ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಪರಿಸರ ಇಂತಹ ದೊಡ್ಡ ದೊಡ್ಡ ಪದಗಳನ್ನು ನಾವು ಕೇಳುತ್ತೇವೆ. ಆದಿವಾಸಿಗಳಿಗೆ ಈ ಯಾವ ಪಾಠಗಳೂ ಬೇಕಿಲ್ಲ. ಏಕೆಂದರೆ ಅವರು ನಮ್ಮ ಸಮಾಜದ ರೀತಿ ರಿವಾಜುಗಳ ಹಾಗೂ ಬದುಕಿನ ಭಾಗವಾಗಿದ್ದಾರೆ. ನಿಜವೆಂದರೆ ಈ ಜಗತ್ತು ಹೇಗೆ ಬದುಕಬೇಕು ಎಂಬುದನ್ನು ಕಲಿಸುವುದು ನಮ್ಮ ಚಾರಿತ್ರಿಕ ಜವಾಬ್ದಾರಿಯಾಗಿದೆ ಸೆಪ್ಟೆಂಬರ್ 21 ರ ನಮ್ಮ ಕಾರ್ಯಕ್ರಮ ಈ ದಿಸೆಯಲ್ಲಿ ನಾವು ಇಡುತ್ತಿರುವ ಮೊದಲ ಹೆಜ್ಜೆಯಾಗಿದೆ.

(ಇಂಗ್ಲೀಷ್ ಲೇಖನ)

**ನೀಲಾಂಜನ ಬಿಸ್ವಾಸ್**

**ಕನ್ನಡಕ್ಕೆ : ಶ್ಯಾಮಲ.**

# ಸ್ತ್ರೀ ನಿನ್ನ ಸ್ಥಿತಿಯ ನೆನೆಸಿ

ಬಿಟ್ಟರೂ ಬಿಡಬಹುದಲ್ಲ ಎರಡೇಟು
ಮುಖ ಕೊಟ್ಟು ಚುಂಬಿಸುವ ಸುಗಂಧ ಕೊರಡು ॥
ಎದುರುತ್ತರ ಮಾರು ಪ್ರಶ್ನೆ ನಿನಗೇಕೆ ನಲ್ಲೆ ?
ಬಾಯಿ ಮುಚ್ಚಿದ ದುಡಿತವೊಂದೇ,
ನಿನ್ನ ಪಾಲಿನ ನಗುವಿನ ಮಾಲೆ
ಎಂದಾದರೊಮ್ಮೆ ದುಡುಕಿದೆಯಾದರೂ ಕಳೆದೆ
ಮನೆತನದ ಮಾನ ಮರ್ಯಾದೆ
ಹೆತ್ತವರ ಆರತಕ್ಷತೆ ತಟ್ಟೆ ಕಣ್ಣೀರ ಮುಂದೆ
ಆಚೆಯಾದರೂ ನಿಲ್ಲು ಈಚೆಯೋ ಕೊರಗು
ಮರುನುಡಿಯೇನೂ ಸಲ್ಲ
ವರದಕ್ಷಿಣೆ ಇಲ್ಲವೆಂದಾದರೂ ಬರುವ
ಆ ನಿನ್ನ ಬಳಿ ಅತ್ಯಾಕರ್ಷಣೆಯ ಕನಸಲ್ಲಿ
ಸೊಕ್ಕಿದ್ದರೂ ಮಾರುದ್ದ ಹಣೆಬರಹ, ಸ್ವತಂತ್ರ
ಹಕ್ಕಿ ನಿನ್ನದೇನಲ್ಲ
ಸಮಾನತೆಯ ಹಾದಿ ತುಳಿಯುವಲ್ಲೂ
ಬಿಂಕ ಬಿಗುಮಾನ ಬುಟ್ಟಿ
ಸ್ವಾಭಿಮಾನವ ಕೆರಳಿಸಿ, ದಂಗೆ ಬಡಿಯುವ
ಶಕ್ತಿಗೆ ತಲೆಬಾಗಿ
ಕೊರಳ ಕೊಂಕಿಸಿದರೂ ಕಿಂಡಿಯ ಕೃಷ್ಣ
ಬಿಟ್ಟರೂ ಬಿಡಬಹುದಲ್ಲ........?

**ಕಲ್ಪನಾ ಅರುಣ್,**
101, ಹನುಮಂತರಾಯ ಬಿಲ್ಡಿಂಗ್,
ಹೆಚ್.ಎ.ಎಲ್. ಕೊನಿನ ಅಗ್ರಹಾರ,
ಬೆಂಗಳೂರು - 17

# ಸಂಚಲನ ಸೃಷ್ಟಿಸಿದ ಬಾಲಕಿಯ ಡೈರಿ

ನಿಮಗೆ ಡೈರಿ ಬರೆಯುವ ಹವ್ಯಾಸ ಇದೆಯೇ ? ಇದ್ದರೂ ಅಥವಾ ಇಲ್ಲದಿದ್ದರೂ ಈಗ ಒಂದು ಡೈರಿ ಕುರಿತು ತಿಳಿದುಕೊಳ್ಳಿ, ಆ ಡೈರಿಯು ಪುಸ್ತಕ ರೂಪದಲ್ಲಿ ಪ್ರಕಟಗೊಂಡು ವಿಶ್ವದಲ್ಲೆಲ್ಲಾ ಸಂಚಲನವನ್ನುಂಟು ಮಾಡಿತು. ಡಾಕ್ಯುಮೆಂಟರಿಯಾಗಿ ರೂಪುಗೊಂಡು ಟಿ.ವಿ.ಯಲ್ಲೂ ಪ್ರಸಾರವಾಯಿತು. ಸಿ.ಡಿಗಳು ಕೂಡ ಬಿಡುಗಡೆಯಾಗಿ ಬಹುಮಂದಿಯ ಮೆಚ್ಚುಗೆಗೆ ಅರ್ಹವಾದುವು ! ಹಾಗಾದರೆ ಆ ಡೈರಿ ಯಾವುದೋ ದೇಶದ ನಾಯಕ ಬರೆದಿರಬಹುದೆಂದು ಕೊಳ್ಳಬೇಡಿ.

ಆ ಡೈರಿಯ ಕರ್ತೃ ಹದಿಮೂರು ವರ್ಷದ ಬಾಲಕಿ. ಆಕೆ ಕುರಿತಂತೆ ಮತ್ತು ಆ ಡೈರಿಯ ಬಗ್ಗೆ ತಿಳಿದುಕೊಂಡರೆ ನಿಮಗೂ ಡೈರಿ ಬರೆಯಲು ಪ್ರೇರಣೆ ಸಿಗಬಹುದು ಮತ್ತು ಡೈರಿ ಬರೆಯುವುದರಿಂದ ಹೆಚ್ಚು ಪ್ರಯೋಜನಕಾರಿ ಎಂಬುದು ವೇದ್ಯವಾಗುತ್ತದೆ.

ಆ ಬಾಲಕಿಯ ಹೆಸರು ಆ್ಯನಿಫ್ರ್ಯಾಂಕ್. ಎರಡನೇ ವಿಶ್ವ ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಆ ಬಾಲಕಿ ಅನೇಕ ಕಷ್ಟಗಳನ್ನು ಅನುಭವಿಸಿದಳು. ಭಯಂಕರ ಪರಿಸ್ಥಿತಿಗಳನ್ನು ಎದುರಿಸಿದಳು. ಪ್ರಾಣ ರಕ್ಷಿಸಿಕೊಳ್ಳಲು ಓಡಿದ್ದೂ ಉಂಟು. ಶತ್ರು ಶಿಬಿರಗಳಲ್ಲಿ ಅವಮಾನ, ಚಿತ್ರ ಹಿಂಸೆಗಳನ್ನು ಸಹಿಸಿಕೊಂಡಳು. ಆದರೆ ಆಕೆಗೆ ಚಿಕ್ಕವಯಸ್ಸಿನಲ್ಲಿ ಡೈರಿ ಬರೆಯುವ ಹವ್ಯಾಸ ಇತ್ತು.

ತನ್ನ ಅನುಭವಗಳು, ಸುತ್ತಲಿನ ಘಟನೆಗಳನ್ನು ಆಕೆ ಯಥಾ ರೀತಿ ದಾಖಲಿಸಿದಳು. ಯುದ್ಧ ನಂತರ ಆಕೆ ಬರೆದಿದ್ದ ಡೈರಿ 'ಡೈರಿ ಆಫ್ ಯಂಗ್ ಗರ್ಲ್' ಹೆಸರಿನಲ್ಲಿ ಬಿಡುಗಡೆಯಾಗಿ ವಿಶ್ವವಿದಾದ್ಯಂತ ಸಂಚಲನವನ್ನು ಸೃಷ್ಟಿಸಿತು. ಎರಡನೇ ಮಹಾಯುದ್ಧದಲ್ಲಿ ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ನೇತೃತ್ವದಲ್ಲಿ ನಾಜಿ ಸೈನಿಕರು ಎಸಗಿದ ಕುಕೃತ್ಯಗಳ ಬಗ್ಗೆ ಪತ್ರಿಕೆಗಳಲ್ಲೂ ನೀವು ಓದಿರಬಹುದು.

ಆಗಿನ ಸಂದರ್ಭದಲ್ಲಿ ಆ್ಯನಿಫ್ರ್ಯಾಂಕ್ ತನ್ನ ತಂದೆ, ತಾಯಿ, ಸೋದರರೊಂದಿಗೆ ಪಾಳುಬಿದ್ದ ಒಂದು ಫ್ಯಾಕ್ಟರಿಯಲ್ಲಿ ರಹಸ್ಯವಾಗಿ ಕೆಲವು ವರ್ಷ ವಾಸಿಸಿದ್ದಳು. ಆ ಸಮಯದಲ್ಲಿ ಬಾಲಕಿಯು ನಾಜಿ ಸೈನಿಕರ ಕಿರಾತಕ ಕೃತ್ಯಗಳ ಬಗ್ಗೆ ಡೈರಿಯಲ್ಲಿ ಬರೆದುಕೊಂಡಳು. ಆ ನಂತರ ಆಕೆಯ ಬಂಧುಗಳೆಲ್ಲ ಸೆರೆ ಸಿಕ್ಕು ಸೈನಿಕರ ಶಿಬಿರಗಳಲ್ಲಿ ಬಂಧಿಯಾದರು. ಅಲ್ಲೇ ಆ್ಯನಿ ತನ್ನ 15 ನೇ ವಯಸ್ಸಿನಲ್ಲಿ ಮರಣ ಹೊಂದಿದಳು.

ಅಪಾರ ಅಭಿಮಾನಿಗಳ ಪ್ರಶಂಸೆಗೊಳಗಾದ ಆ ಡೈರಿ ಆಧಾರದಿಂದ ಅಮೆರಿಕದಲ್ಲಿ 12 ಮಿಲಿಯನ್ ಡಾಲರ್ (ಸುಮಾರು 60 ಕೋಟಿ) ವೆಚ್ಚದಲ್ಲಿ ಒಂದು ಡಾಕ್ಯುಮೆಂಟರಿಯನ್ನು ನಿರ್ಮಿಸಿದರು. ಅದು ಟಿ.ವಿಯಲ್ಲೂ ಪ್ರಸಾರಗೊಂಡು ಮತ್ತಷ್ಟು ಜನಪ್ರಿಯತೆಗೆ ಕಾರಣವಾಯಿತು.

ಇದರಲ್ಲಿ 13 ವರ್ಷದ ಹನ್ನಾ ಟೇಲರ್ ಗಾರ್ಡನ್ ಎಂಬ ಬಾಲಕಿಯೇ ಅಭಿನಯಿಸಿದಳು. ಆ್ಯನಿ ಫ್ರ್ಯಾಂಕ್ ಪಾತ್ರದ ಆಕೆಯ ಅಭಿನಯ ಬಹುಮಂದಿಯ ಪ್ರಶಂಸೆಗೆ ಅರ್ಹವಾಯಿತು. ಇದರಲ್ಲಿ ಗಾಂಧಿ ಸಿನಿಮಾದಲ್ಲಿ ಪ್ರಧಾನ ಪಾತ್ರ ಅಭಿನಯಿಸಿದ ಬೆನ್ ಕಿಂಗ್‌ಸ್ಲೆ ಆ್ಯನಿ ಫ್ರ್ಯಾಂಕ್‌ಳ ತಂದೆಯಾಗಿ ಕಾಣಿಸಿಕೊಂಡರು.

ಈಗ ನಿಮಗೆ ಗೊತ್ತಾಯಿತಲ್ಲವೇ ? ಈ ರೀತಿ ಡೈರಿಯನ್ನು ಯಥಾವತ್ತಾಗಿ ಚಾಚು ತಪ್ಪದೇ ಬರೆಯುವುದು ಒಂದು ಉತ್ತಮ ಹವ್ಯಾಸ ಎಂದು. ಅವಕಾಶ ಸಿಕ್ಕರೆ ಆ ಡಾಕ್ಯುಮೆಂಟರಿಯನ್ನು ತಪ್ಪದೇ ನೋಡಿ.

- ವಿ.ಹನುಮಂತಪ್ಪ

---

ಯುದ್ಧದಲ್ಲಿ ತೊಡಗಿದ ಪ್ರತಿಗುಂಪೂ ತಾನು ಆತ್ಮರಕ್ಷಣೆಗಾಗಿಯೆ ಯುದ್ಧಕ್ಕಿಳಿಯ ಬೇಕಾಯಿತೆಂದು ಹೇಳುತ್ತದೆ. ರಕ್ಷಣಾತ್ಮಕ ಯುದ್ಧಗಳು, ಆಕ್ರಮಣ ಶೀಲ ಯುದ್ಧಗಳು ಸದಾ ನಡೆದೆ ಇವೆ. ಶತಮಾನಗಳ ಕಾಲ ಯುದ್ಧವೆಂಬ ರಾಕ್ಷಸೀ ಕ್ರೀಡೆ ನಡೆಯುತ್ತಲೇ ಬಂದಿದೆ. ದುರಾದೃಷ್ಟವೆಂದರೆ, ನಾವು, ವಿದ್ಯಾವಂತರು, ಸಂಸ್ಕೃತಿ ಸಂಪನ್ನರು ಎಂದು ಕೊಳ್ಳುವವರು ಅತ್ಯಂತ ಬರ್ಬರ ಕೊಲೆಗಡುಕತನದಲ್ಲಿ ಮೈ ಮರೆತಿದ್ದೇವೆ ಆದ್ದರಿಂದ, ಮನುಷ್ಯನ ಆಳದಲ್ಲಿರುವ ಈ ಹಿಂಸೆ, ಈ ಆಕ್ರಮಣ ಶೀಲತೆಯನ್ನು ಕುರಿತು ಪರಿಶೀಲಿಸೋಣವೆ ? ಈ ಹಿಂಸೆಯಿಂದ ಬಿಡುಗಡೆ ಪಡೆಯಲು ಸಾಧ್ಯವಿದೆಯೆ ಎಂಬುದನ್ನು ನೋಡಣವೇ ?

ಜೆ.ಕೃಷ್ಣಮೂರ್ತಿ

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

**ವಾರ್ಷಿಕ ಚಂದಾ : 100 ರೂ**

**ಸಂಸ್ಥೆಗಳಿಗೆ : 150 ರೂ**

ಸಂ.ಮಂಡಳಿ

REGD No. : CPMG/KA/BGE/289/2003 - 05

BOOK-POST
PRINTED MATTER




ವಿಳಾಸ :
ಮಾನಸ
ಪಂಚಾಯಿತಿ ರಸ್ತೆ,
ಕಾಡುಗೋಡಿ,
ಬೆಂಗಳೂರು - 560 067.

B.N. Sumithra Bai,
509, 16th Main,
Banashankari 1st Stage,
Srinagar, Bangalore – 560 050.